# ಅಧ್ಯಾಯ 10

# ನಂಬಿಕೆಯಿಂದ ನೀತಿವಂತರೆಂಬ ನಿರ್ಣಯವು ಇಸ್ರಾಯೇಲ್ಯಗೆ ಮಾಡಿದ ವಾಗ್ದಾನಗಳೊಂದಿಗೆ ಸಂಧಾನಗೊಳಿಸಿತು (ಭಾಗ 2)

ಯೆಹೂದ್ಯರು ತಾವು ದೇವರಿಂದ ತಿರಸ್ಕರಿಸಲ್ಪಟ್ಟಿದ್ದಕ್ಕೆ ತಮ್ಮನ್ನೆ ಹೊರತು ಬೇರೆ ಇನ್ಯಾರ ಮೇಲೂ ತಪ್ಪು ಹೊರಿಸುವದಕ್ಕೆ ಸಾಧ್ಯವಿರಲಿಲ್ಲ, ಯಾಕೆಂದರೆ ಅವರು ಸ್ವತಃ ಸರಿಯಾದ ದಾರಿಯನ್ನು ನಿರ್ಲಕ್ಷಿಸಿ ತಪ್ಪು ದಾರಿಯಲ್ಲಿ ಹೋಗುವದನ್ನು ಮೊಂಡುತನದಿಂದ ಮುಂದುವರೆಸಿದ್ದರು (9:31, 32). 10:1-13ರಲ್ಲಿ, ಜನರು ಹೋಗಬಹುದಾದ ಎರಡು ದಾರಿಗಳ ನಡುವೆ ಪೌಲನು ವಿರುದ್ಧ ಹೋಲಿಕೆ ಮಾಡುತ್ತಾನೆ. ಹಾಗೆ ಮಾಡುವ ಮೂಲಕ, ಯೆಹೂದ್ಯರು *ತಪ್ಪು* ದಾರಿಯನ್ನು ಹಿಡಿದಿದ್ದರು ಎಂಬ ವಿಚಾರವನ್ನು ಆತನು ಎತ್ತಿತೋರಿಸುತ್ತಾನೆ.

## ಯೆಹೂದ್ಯರು ರಕ್ಷಣೆ ಹೊಂದಬೇಕೆಂಬ ಪೌಲನ ಅಭಿಲಾಷೆ (10:1-4)

**1ಸಹೋದರರೇ, ಇಸ್ರಾಯೇಲ್ಯರು ರಕ್ಷಣೆಹೊಂದಬೇಕೆಂಬದೇ ನನ್ನ ಮನೋಭಿಲಾಷೆಯೂ ದೇವರಿಗೆ ನಾನು ಮಾಡುವ ವಿಜ್ಞಾಪನೆಯೂ ಆಗಿದೆ. 2ದೇವರಲ್ಲಿ ಆಸಕ್ತರಾಗಿದ್ದಾರೆಂದು ನಾನು ಅವರ ವಿಷಯದಲ್ಲಿ ಸಾಕ್ಷಿಕೊಡುತ್ತೇನೆ; ಆದರೂ ಅವರ ಆಸಕ್ತಿ ಜ್ಞಾನಾನುಸಾರವಾದದ್ದಲ್ಲ. 3ಅವರು ದೇವರಿಂದ ದೊರಕುವ ನೀತಿಯನ್ನರಿಯದೆ ಸ್ವನೀತಿಯನ್ನೇ ಸ್ಥಾಪಿಸಬೇಕೆಂದು ಪ್ರಯತ್ನಿಸುತ್ತಾ ಇದ್ದದರಿಂದ ದೇವರ ನೀತಿಗೆ ಅಧೀನರಾಗಲಿಲ್ಲ 4ನಂಬುವವರೆಲ್ಲರಿಗೆ ನೀತಿಯನ್ನು ದೊರಕಿಸಿರುವ ಕ್ರಿಸ್ತನಿಂದಲೇ ಕರ್ಮಮಾರ್ಗಕ್ಕೆ ಅಂತ್ಯವಾಯಿತು.**

**ವಚನ 1.** ಪೌಲನು ತನ್ನ ಸಹ ಜನಾಂಗದವರಿಗೋಸ್ಕರ ತನಗಿರುವ ಪ್ರೀತಿ ಮತ್ತು ಹಿತಾಸಕ್ತಿಯನ್ನು ಮತ್ತೊಮ್ಮೆ ದೃಢಪಡಿಸುತ್ತಾನೆ (ನೋಡಿರಿ 9:1-3). ಆತನು ಹೀಗೆ ಹೇಳುತ್ತಾನೆ, **ಸಹೋದರರೇ, ಇಸ್ರಾಯೇಲ್ಯರು ರಕ್ಷಣೆಹೊಂದಬೇಕೆಂಬದೇ ನನ್ನ ಮನೋಭಿಲಾಷೆಯೂ ದೇವರಿಗೆ ನಾನು ಮಾಡುವ ವಿಜ್ಞಾಪನೆಯೂ ಆಗಿದೆ.** ಈ ವಚನದಲ್ಲಿ, "ಸಹೋದರರೇ" ಎಂಬುದು ಕ್ರೈಸ್ತರನ್ನು ಸೂಚಿಸುತ್ತದೆ ಮತ್ತು "ಇಸ್ರಾಯೇಲ್ಯರು" ("ಅವರ") ಎಂಬುದು ಯೆಹೂದ್ಯರನ್ನು ಸೂಚಿಸುತ್ತದೆ (ನೋಡಿರಿ NIV). ಪೌಲನು ಯೆಹೂದ್ಯರ ಕಳೆದುಹೋಗಿರುವ ಸ್ಥಿತಿಯ ಬಗ್ಗೆ ಕಾಳಜಿಯುಳ್ಳವನಾಗಿದ್ದನು—ಆಳವಾದ ಕಾಳಜಿ ಹೊಂದಿದ್ದನು. ಆತನು "ಅವರು ರಕ್ಷಣೆ ಹೊಂದಬೇಕೆಂಬುದೇ" ನನ್ನ ಆಶೆಯೆಂದು ಪ್ರಾರ್ಥಿಸಿದನು: ಅವರು ಯೇಸುವಿನ ಕುರಿತ ಸತ್ಯವನ್ನು ಗ್ರಹಿಸಿಕೊಳ್ಳುವಂತಾಗಲೆಂದು. Phillips ತರ್ಜುಮೆಯಲ್ಲಿ ಹೀಗಿದೆ, "ಇಸ್ರಾಯೇಲ್ಯರು ರಕ್ಷಣೆ ಹೊಂದಬೇಕೆಂಬದಾಗಿ ನನ್ನ ಹೃದಯಾಂತರಾಳದಿಂದ ಹಂಬಲಿಸುತ್ತೇನೆ ಮತ್ತು ದೇವರನ್ನು ಪ್ರಾರ್ಥಿಸುತ್ತೇನೆ!" ನಮ್ಮ ಸುತ್ತಲೂ ಜೀವಿಸುವ ಕಳೆದುಹೋಗಿರುವವರಿಗೋಸ್ಕರ, ಲೋಕದಲ್ಲೆಲ್ಲಾ ಇರುವ ಕಳೆದುಹೋಗಿರುವವರಿಗೋಸ್ಕರ ನಾವು ಆ ವಿಧವಾದ ಕಾಳಜಿಯನ್ನು ಹೊಂದಿದ್ದೇವೋ? ನಾವು ಅವರಿಗೋಸ್ಕರ ಪ್ರಾರ್ಥಿಸುತ್ತಿದ್ದೇವೋ?

**ವಚನ 2.** ಪೌಲನು ಮುಂದುವರೆದು ಹೇಳುತ್ತಾನೆ, **ದೇವರಲ್ಲಿ ಆಸಕ್ತರಾಗಿದ್ದಾರೆಂದು ನಾನು ಅವರ** [ಯೆಹೂದ್ಯರು] **ವಿಷಯದಲ್ಲಿ ಸಾಕ್ಷಿಕೊಡುತ್ತೇನೆ; ಆದರೂ ಅವರ ಆಸಕ್ತಿ ಜ್ಞಾನಾನುಸಾರವಾದದ್ದಲ್ಲ.** "ಸಾಕ್ಷಿಕೊಡುತ್ತೇನೆ" ಎಂಬುದು μαρτυρέω (*martureō*) ಎಂಬ ಪದದಿಂದ ಬಂದಿದ್ದು ಅದರರ್ಥವು "ಸಾಕ್ಷ್ಯ ನೀಡು" "ಸ್ವಂತ ಅನುಭವದ ಆಧಾರದಲ್ಲಿ" ಎಂದಾಗುತ್ತದೆ.[1] ಪೌಲನು ಈ ವಿಷಯದಲ್ಲಿ ಸಾಕ್ಷಿಹೇಳುವದಕ್ಕೆ ಶಕ್ತನಾಗಿದ್ದನು ಯಾಕೆಂದರೆ ಆತನು ಸ್ವತಃ ತನ್ನ ಜೀವಿತದ ಮೂಲಕ ಖುದ್ದು ತಿಳುವಳಿಕೆ ಪಡೆದಿದ್ದನು. ಆತನು ಯೆರೂಸಲೇಮಿನ ಹಿರೀಸಭೆಯ ಮುಂದೆ ಹೀಗೆ ಹೇಳಿದನು, "ನಾನು ಯೆಹೂದ್ಯನು, ಕಿಲಿಕ್ಯದ ತಾರ್ಸದಲ್ಲಿ ಹುಟ್ಟಿದವನು, ಆದರೆ ಈ ಪಟ್ಟಣದಲ್ಲೇ ಬೆಳೆದವನು. ಗಮಲಿಯೇಲನ ಪಾದಸನ್ನಿಧಿಯಲ್ಲಿ ನಮ್ಮ ಪಿತೃಗಳ ಧರ್ಮಶಾಸ್ತ್ರದಲ್ಲಿ ಪೂರ್ಣ ಶಿಕ್ಷಿತನಾದೆನು; ನೀವೆಲ್ಲರೂ ಈ ಹೊತ್ತು *ದೇವರ ವಿಷಯದಲ್ಲಿ* ಅಭಿಮಾನಿಯಾಗಿರುವಂತೆಯೇ ನಾನು *ಅಭಿಮಾನಿಯಾಗಿದ್ದೆನು"* (ಅಪೊಸ್ತಲರ ಕೃತ್ಯಗಳು 22:3; ಒತ್ತಿ ಹೇಳಿದ್ದು ನನ್ನದು; ನೋಡಿರಿ ಗಲಾತ್ಯ 1:13, 14; ಫಿಲಿಪ್ಪಿ 3:6).

"ಆಸಕ್ತಿ" (Zeal) ಎಂಬುದು ಗ್ರೀಕ್‌ನ ζῆλος (*zēlos*) ಎಂಬುದರ ಲಿಪ್ಯಂತರಣವಾಗಿರುತ್ತದೆ, ಅದು "ಕುದಿಯುವದು, ಬಿಸಿಯಾಗಿರುವದು" (ζέω, *zeō*)[2] ಎಂಬದರಿಂದ ಬಂದಿರುತ್ತದೆ. ನಾವು ಆತನಿಗೋಸ್ಕರ "ಪ್ರಜ್ವಲಿಸುತ್ತಿರಬೇಕು" ಎಂದು ದೇವರು ಬಯಸುತ್ತಾನೆ. ಯೇಸು ಲವೊದಿಕೀಯದಲ್ಲಿರುವ ಸಭೆಗೆ, "ನೀನು ಬೆಚ್ಚಗೂ ಇಲ್ಲದೆ ತಣ್ಣಗೂ ಇಲ್ಲದೆ ಉಗುರುಬೆಚ್ಚಗಿರುವದರಿಂದ ನಿನ್ನನ್ನು ನನ್ನ ಬಾಯೊಳಗಿಂದ ಕಾರುವೆನು" ಎಂದು ಹೇಳಿದನು (ಪ್ರಕಟನೆ 3:16). ಕ್ರಿಸ್ತನು ಚಿನಿವಾರರನ್ನು ದೇವಾಲಯದೊಳಗಿಂದ ಓಡಿಸಿಬಿಟ್ಟ ವೇಳೆ, ದೇವರ ಆಲಯಾಭಿಮಾನವು ಬೆಂಕಿಯಂತೆ ಆತನನ್ನು "ದಹಿ [ಸಿತು] ಸುತ್ತದೆ" ಎಂದು ಹೇಳಲ್ಪಟ್ಟಿತು (ಯೋಹಾನ 2:17).

ಅಭಿಮಾನವು ತಿಳಿವಳಿಕೆಯ ನಿಯಂತ್ರಣ ಮತ್ತು ನಿರ್ದೇಶನದಲ್ಲಿರತಕ್ಕದ್ದು. ಜ್ಞಾನಿಯು

ಹೀಗೆ ಹೇಳಿದನು, "ತಿಳಿವಳಿಕೆಯಿಲ್ಲದೆ ಕೋರುವದು ಅಯುಕ್ತ" (ಜ್ಞಾನೋಕ್ತಿ 19:2; NLT). 10:2ರಲ್ಲಿನ "ತಿಳಿವಳಿಕೆ" ಎಂಬುದರ ಅನುವಾದಿತ ಪದವು ἐπίγνωσι (*epignōsis*) ಎಂಬುದು—"ತಿಳಿವಳಿಕೆ" (γνῶσις, *gnōsis*) ಎಂಬದಕ್ಕಾಗಿರುವ ಪದವು ἐπί (*epi*) ಎಂಬ ಉಪಸರ್ಗದಿಂದ ಬಲಗೊಂಡದ್ದಾಗಿದೆ. *Epignōsis* ಎಂಬುದು "'ಸರಿಯಾದ ಅಥವಾ ಪೂರ್ಣ ತಿಳಿವಳಿಕೆ'ಯನ್ನು ಸೂಚಿಸುತ್ತದೆ."[3] ಯೆಹೂದ್ಯರು ಅಭಿಮಾನದಿಂದ ತುಂಬಿದ್ದರು ಆದರೆ ತಿಳಿವಳಿಕೆಯಲ್ಲಿ ಕೊರತೆಯುಳ್ಳವರಾಗಿದ್ದರು. ಅವರಿಗೆ ಒಂದು "ತಪ್ಪು—ಮಾಹಿತಿಯುಳ್ಳ ಅಭಿಮಾನ" ಇತ್ತು (NEB), ಒಂದು "ದಾರಿತಪ್ಪಿದ" ತಿಳಿವಳಿಕೆ (JB), ಒಂದು "ತಪ್ಪುದಿಕ್ಕಿಗೆ ನಡಿಸಲ್ಪಟ್ಟ" (LB) ತಿಳಿವಳಿಕೆ ಇತ್ತು.

**ವಚನ 3.** ಖಂಡಿತವಾಗಿಯೂ, ಯೆಹೂದ್ಯರು ತಮಗೆ ತಿಳಿವಳಿಕೆಯ ಕೊರತೆಯಿರುವದನ್ನು ನಿರಾಕರಿಸಿರುತ್ತಿದ್ದರು. ಅಂತೂ, ಅವರು ಶಾಸ್ತ್ರಗಳ ಬಹಳಷ್ಟು ಭಾಗವನ್ನು ಕಂಠಪಾಠವಾಗಿ ಹೇಳಬಲ್ಲವರಾಗಿದ್ದರಷ್ಟೆ. ಅವರು ಹೀಗೆ ಮಾಡುವದಕ್ಕೆ ಶಕ್ತರಾಗಿದ್ದರಾದರೂ, ಆವರು *ಪೂರ್ಣ* ತಿಳಿವಳಿಕೆ ಹೊಂದಿದವರಾಗಿರಲಿಲ್ಲ. ಯೆಹೂದ್ಯರಿಗೆ ಕೆಲವು ಸಂಗತಿಗಳು ಗೊತ್ತಿದ್ದವು, ಆದರೆ ಅವರು ಅತ್ಯಂಥ ಪ್ರಾಮುಖ್ಯವಾದ ಸಂಗತಿಯಲ್ಲಿ ಅಜ್ಞಾನಿಗಳಾಗಿದ್ದರು. 3ನೇ ವಚನವು ಹೀಗೆ ಆರಂಭಗೊಳ್ಳುತ್ತದೆ, **ಅವರು ದೇವರಿಂದ ದೊರಕುವ ನೀತಿಯನ್ನರಿಯದೆ.** "ದೇವರಿಂದ ದೊರಕುವ ನೀತಿಯನ್ನರಿಯದೆ" ಎಂಬುದು ಇಲ್ಲಿ ದೇವರ ಗುಣವನ್ನು ಸೂಚಿಸುವದಿಲ್ಲ, ಆದರೆ ಮನುಷ್ಯರನ್ನು ನೀತಿವಂತರೆಂದು ಎಣಿಸುವದಕ್ಕೆ ಆತನು ಮಾಡಿರುವ ವ್ಯವಸ್ಥೆಯನ್ನು ಸೂಚಿಸುತ್ತದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಅದು ಕೃಪೆ/ನಂಬಿಕೆ ವ್ಯವಸ್ಥೆಯನ್ನು ಸೂಚಿಸುತ್ತದೆ. ಯೆಹೂದ್ಯರು ಈ ವಿಷಯದಲ್ಲಿ ಇಚ್ಛಾಪೂರ್ವಕವಾಗಿಯೇ ಅಜ್ಞಾನಿಗಳಾಗಿದ್ದರು ಯಾಕೆಂದರೆ ಅದು ಅವರು ಸೃಷ್ಟಿಸಿಕೊಂಡಿದ್ದ ಧರ್ಮಶಾಸ್ತ್ರ/ಕ್ರಿಯೆಗಳ ವ್ಯವಸ್ಥೆಗೆ ತದ್ವಿರುದ್ಧವಾಗಿತ್ತು.

ಪೌಲನು ಹೇಳಿದ್ದೇನೆಂದರೆ ಅವರು **ಸ್ವನೀತಿಯನ್ನೇ** [ಸರಿಯಾದವರು ಎಂದು ಎಣಿಸಲ್ಪಡುವ ವ್ಯವಸ್ಥೆ] **ಸ್ಥಾಪಿಸಬೇಕೆಂದು ಪ್ರಯತ್ನಿಸುತ್ತಾ ಇದ್ದದರಿಂದ ದೇವರ ನೀತಿಗೆ ಅಧೀನರಾಗಲಿಲ್ಲ.** ಅಪೊಸ್ತಲನು ಪುನಃ ಇಲ್ಲಿ ತನ್ನ ಸ್ವಂತ ಅನುಭವದಿಂದ ಮಾತಾಡುತ್ತಿದ್ದಾನೆ. ಫಿಲಿಪ್ಪಿ 3:9ರಲ್ಲಿ, ಆತನು ಕ್ರಿಸ್ತನನ್ನು ಹಿಂಬಾಲಿಸುವದಕ್ಕೋಸ್ಕರ ಏನೆಲ್ಲಾ ತ್ಯಜಿಸಿದ್ದಾನೆಂಬುದುರ ಪಟ್ಟಿಯನ್ನು ಕೊಡುತ್ತಾನೆ, ಆತನು ತನ್ನ ಬಯಕೆಯು, "ನಾನು ಕ್ರಿಸ್ತನನ್ನು ಸಂಪಾದಿಸಿಕೊಂಡು *ನೇಮನಿಷ್ಠೆಗಳ ಫಲವಾಗಿರುವ ಸ್ವನೀತಿಯನ್ನಾಶ್ರಯಿಸದೆ* ಕ್ರಿಸ್ತನನ್ನು ನಂಬುವದರಿಂದ ದೊರಕುವಂಥ ಅಂದರೆ ಕ್ರಿಸ್ತನ ಮೇಲಣ ನಂಬಿಕೆಯ ಆಧಾರದಿಂದ ದೇವರು ಕೊಡುವಂಥ ನೀತಿಯನ್ನೇ ಹೊಂದಿ ಕ್ರಿಸ್ತನಲ್ಲಿರುವವನಾಗಿ ಕಾಣಿಸಿಕೊಳ್ಳಬೇಕೆಂಬದೇ" ಎಂದು ವ್ಯಕ್ತಪಡಿಸುತ್ತಾನೆ (ಒತ್ತಿ ಹೇಳಿದ್ದು ನನ್ನದು).

ಪೌಲನು ಯೆಹೂದ್ಯರ ವಿಷಯವಾಗಿ ಹೇಳಿದ್ದನ್ನು ಒಟ್ಟಾರೆಯಾಗಿ ಮಾನವ ಜನಾಂಗದ ಬಗ್ಗೆ ಸಹ ಹೇಳಬಹುದಾಗಿದೆ: ದೇವರ ಮಾರ್ಗದ ಬಗ್ಗೆ ತೃಪ್ತಿಗೊಳ್ಳದೆ, ಜನರು ಪರಲೋಕಕ್ಕೆ ಹೋಗಲು ತಮ್ಮತಮ್ಮ ವಿಧಾನಗಳನ್ನು ಸ್ಥಾಪಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿದ್ದಾರೆ. ಅನೇಕರಿಗೆ ಬಹಳ ನೆಚ್ಚಿನ ಸಂಕಿರ್ತನೆ ಎಂದರೆ "ನಾನು ಅದನ್ನು ನನ್ನ ದಾರಿಯಲ್ಲಿಯೇ ಮಾಡಿದೆ."[4] ನಾವು ಸಂಗತಿಗಳನ್ನು ನಮ್ಮ ದಾರಿಯಲ್ಲಿ ಅಲ್ಲ, ಆತನ ದಾರಿಯಲ್ಲಿಯೇ

ಮಾಡುವದಕ್ಕೆ ತೀರ್ಮಾನಿಸಿಕೊಳ್ಳುವಂತೆ ದೇವರು ನಮಗೆ ಸಹಾಯ ಮಾಡಲಿ!

**ವಚನ 4.** ಯೆಹೂದ್ಯರು ನೀತಿವಂತರೆಂದು ಎಣಿಸಲ್ಪಡುವದಕ್ಕೆ ಧರ್ಮಶಾಸ್ತ್ರ ಕೈಕೊಂಡು ನಡೆಯುವದರ ಮೇಲೆ ಆಧಾರಗೊಂಡಿದ್ದರು. ಪೌಲನು ಇದರ ಅಸಾಧ್ಯತೆಯನ್ನು ಮುಂದಿನ ಎರಡು ವಚನಗಳಲ್ಲಿ ದೃಷ್ಟಾಂತಗೊಳಿಸುತ್ತಾನೆ. ವಚನ 4 ಹೀಗೆ ಹೇಳುತ್ತದೆ, **ನಂಬುವವರೆಲ್ಲರಿಗೆ ನೀತಿಯನ್ನು ದೊರಕಿಸಿರುವ ಕ್ರಿಸ್ತನಿಂದಲೇ ಕರ್ಮಮಾರ್ಗಕ್ಕೆ ಅಂತ್ಯವಾಯಿತು.** "ಅಂತ್ಯವಾಯಿತು" ಎಂಬುದು τέλος (*telos*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ, ಅದು ಹಲವಾರು ಸಂಭಾವ್ಯ ಅರ್ಥಗಳುಳ್ಳ ಪದವಾಗಿರುತ್ತದೆ. ಅದು "ಅಂತ್ಯ [ಸಮಾಪ್ತಿಗೊಳಿಸುವಿಕೆ]" ಎಂಬರ್ಥವಾಗಬಹುದು, NASB ಮತ್ತು ಇತರ ತರ್ಜುಮೆಗಳಲ್ಲಿ (KJV; NKJV; ASV; RSV; NRSV; TEV; NIV; ESV; REB) ಈ ಅರ್ಥವು ಸೂಚಿಸಲ್ಪಟ್ಟಿರುತ್ತದೆ. ಅಲ್ಲದೆ ಅದು "ಗಮ್ಯಸ್ಥಾನ" ಎಂಬ ಅರ್ಥವನ್ನು ಸಹ ಕೊಡಬಲ್ಲದು, ಕೆಲವು ತರ್ಜುಮೆಯಲ್ಲಿ ಓದಲು ಸಿಕ್ಕುವಂಥದ್ದು (CJB; McCord).

ಮೋಶೆಯ ಧರ್ಮಶಾಸ್ತ್ರಕ್ಕೆ ಸಂಬಂಧಪಟ್ಟಂತೆ, ಎರಡೂ ಅರ್ಥನಿರೂಪನೆಗಳು ಸತ್ಯವಾಗಿರುತ್ತವೆ. ವಾಸ್ತವಾಂಶವೆಂದರೆ, ಎರಡು ಸಹ ಪರಸ್ಪರ ಅತಿವ್ಯಾಪಿಸುತ್ತವೆ.[5] ಕ್ರಿಸ್ತನು ಧರ್ಮಶಾಸ್ತ್ರ "ಗಮ್ಯಸ್ಥಾನ"ದ ವಿಷಯದಲ್ಲಿ, ಪೌಲನು ಗಲಾತ್ಯ 3:24ರಲ್ಲಿ ಬರೆದದ್ದೇನೆಂದರೆ, "ನಾವು ನಂಬಿಕೆಯಿಂದ ನೀತಿವಂತರೆಂಬ ನಿರ್ಣಯವನ್ನು ಹೊಂದುವದಕ್ಕಾಗಿ ಕ್ರಿಸ್ತನಲ್ಲಿಗೆ ಸೇರುವ ತನಕ ಅದು ನಮ್ಮನ್ನು ಕಾಯುತ್ತದೆ." ಆತನ ನಂತರ ಸೇರಿಸಿ ಹೇಳಿದ್ದೇನೆಂದರೆ, "ಆದರೆ ಕ್ರಿಸ್ತ ನಂಬಿಕೆಯು ಬಂದಿರಲಾಗಿ ನಾವಿನ್ನು ಕಾಯುವವನ [ಅಂದರೆ ಧರ್ಮಶಾಸ್ತ್ರದ] ಕೈಕೆಳಗಿರುವವರಲ್ಲ" (ಗಲಾತ್ಯ 3:25). ಕ್ರಿಸ್ತನ ಬರೋಣದ ಒಂದು ಫಲಿತವೇನಾಗಿತ್ತೆಂದರೆ ದೇವರು ತನ್ನ ಜನರಿಗೆ ಕೊಟ್ಟಿದ್ದ ಪ್ರಸ್ತುತ ಪ್ರಕಟನೆಗೆ "ಅಂತ್ಯವಾಯಿತು" (ನೋಡಿರಿ 7:1-6). ಎರಡರಲ್ಲಿ ಯಾವದೇ ಅರ್ಥನಿರೂಪನೆಯು ಸಹ ಯೆಹೂದ್ಯರು ಧರ್ಮಶಾಸ್ತ್ರವನ್ನು ಕೈಕೊಳ್ಳುವದಕ್ಕೆ ಪಡುವ ಪ್ರಯತ್ನವನ್ನು (ನೀತಿಯನ್ನು ಹೊಂದುವದಕ್ಕೆ ದಾರಿಯಾಗಿ) ಕೈಬಿಟ್ಟುಬಿಡಬೇಕಿತ್ತು ಮತ್ತು "ಕರ್ಮಮಾರ್ಗಕ್ಕೆ ಅಂತ್ಯ" ತಂದ ಯೇಸುವಿನಡೆಗೆ ತಿರುಗಿಕೊಳ್ಳಬೇಕಿತ್ತೆಂದು ಘೋಷಿಸುತ್ತದೆ.

ನಾವು 4ನೇ ವಚನವನ್ನು ಬಿಟ್ಟು ಮುಂದಕ್ಕೆ ಹೋಗುವ ಮುನ್ನ, ಪೌಲನು ಮೋಶೆಯ ಧರ್ಮಶಾಸ್ತ್ರದ ಕುರಿತು ಕೇವಲ ಒಂದು ಹೇಳಿಕೆಯನ್ನು ಮಾತ್ರವೇ ನೀಡುತ್ತಿಲ್ಲ ಎಂಬುದನ್ನು ನಾವು ಗಮನಿಸತಕ್ಕದ್ದು. ಆತನು "ಯೆಹೂದ್ಯರ ಸಮಸ್ಯೆ"ಯ ಬಗ್ಗೆ ಮಾತಾಡುತ್ತಿದ್ದನಾದ್ದರಿಂದ, ಖಂಡಿತವಾಗಿಯೂ ಆತನ ಮನಸ್ಸಿನಲ್ಲಿ ಪ್ರಾಥಮಿಕವಾಗಿ ಮೋಶೆಯ ಧರ್ಮಶಾಸ್ತ್ರವಿತ್ತು. ಹೇಗೂ, ನಾವು ಒಂದು ಸಾಮಾನ್ಯವಾದ ಅನ್ವಯಿಕೆಯನ್ನು ಸಹ ಮಾಡಬಹುದಾಗಿದೆ, ಯಾಕೆಂದರೆ ಗ್ರೀಕ್ ವಾಕ್ಯದಲ್ಲಿರುವ 4ನೇ ವಚನದಲ್ಲಿ ಧರ್ಮಶಾಸ್ತ್ರ ಎಂಬುದರ ಮುಂದೆ ಯಾವದೇ ನಿರ್ದಿಷ್ಟ ಲೇಖನವಿರುವದಿಲ್ಲ. "ಅಂತ್ಯ" ಅಥವಾ "ಸಮಾಪ್ತಿಗೊಳಿಸುವಿಕೆ" ಎಂಬ ಅರ್ಥಬರುವಂತೆ *telos* ಎಂಬುದನ್ನು ಉಪಯೋಗಿಸುತ್ತಾ, ನಾವು ವಚನವನ್ನು ವಿಸ್ತರಿಸಿ ಹೀಗೆ ಅರ್ಥಬರುವಂತೆ ಮಾಡಬಹುದು: "[ಯೇಸುವಿನಲ್ಲಿ] ನಂಬುವವರೆಲ್ಲರಿಗೆ [ದೇವರಿಂದಲೇ ಕೊಡಲ್ಪಡುವ] ನೀತಿಯನ್ನು

ದೊರಕಿಸಿರುವ ಕ್ರಿಸ್ತನಿಂದಲೇ [ನೀತಿಯನ್ನು ಹೊಂದಿಕೊಳ್ಳಲು ಪ್ರಯತ್ನಿಸುತ್ತಾ ಕೈಕೊಂಡು ನಡೆದ] ಕರ್ಮಮಾರ್ಗಕ್ಕೆ ಅಂತ್ಯವಾಯಿತು."

## ರಕ್ಷಣೆಗೆ ಆಧಾರವಾಗಿ ನಂಬಿಕೆ (10:5-13)

**[5]ನೇಮನಿಷ್ಠೆಗಳಿಂದಾಗುವ ನೀತಿಯ ವಿಷಯದಲ್ಲಿ-ಅದನ್ನು ಅನುಸರಿಸಿದವನೇ ಅದರಿಂದ
ಜೀವಿಸುವನೆಂದು ಮೋಶೆಯು ಬರೆಯುತ್ತಾನೆ. [6]ಆದರೆ ನಂಬಿಕೆಯಿಂದುಂಟಾಗುವ ನೀತಿಯು
ಏನು ಹೇಳುತ್ತದೆ? ಕ್ರಿಸ್ತನನ್ನು ಕೆಳಕ್ಕೆ ಕರೆದುಕೊಂಡು ಬರುವದಕ್ಕೆ ಯಾರು ಮೇಲಣ
ಲೋಕಕ್ಕೆ ಏರಿಹೋದಾರು? [7]ಎಂದಾಗಲಿ ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿಕೊಂಡು
ಬರುವದಕ್ಕೆ ಯಾರು ಪ್ರೇತಲೋಕಕ್ಕೆ ಇಳಿದುಹೋದಾರು? [8]ಎಂದಾಗಲಿ ನಿನ್ನ ಮನಸ್ಸಿನಲ್ಲಿ
ಅಂದುಕೊಳ್ಳಬೇಡ. ದೇವರ ವಾಕ್ಯವು ನಿನ್ನ ಸಮೀಪದಲ್ಲಿಯೇ ಇದೆ; ಅದು ನಿನ್ನ
ಬಾಯಲ್ಲಿಯೂ ನಿನ್ನ ಹೃದಯದಲ್ಲಿಯೂ ಇದೆ ಅನ್ನುತ್ತದೆ. ಆ ವಾಕ್ಯವು ನಾವು ಸಾರುವ
ನಂಬಿಕೆಯ ವಿಷಯವಾದ ವಾಕ್ಯವೇ. [9]ಅದೇನೆಂದರೆ ನೀನು ಯೇಸುವನ್ನೇ ಕರ್ತನೆಂದು
ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು
ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದೇ. [10]ಹೃದಯದಿಂದ
ನಂಬುವದರ ಮೂಲಕ ನೀತಿಯು ದೊರಕುತ್ತದೆ. ಬಾಯಿಂದ ಅರಿಕೆಮಾಡುವದರ ಮೂಲಕ
ರಕ್ಷಣೆಯಾಗುತ್ತದೆ. [11]ಆತನ ಮೇಲೆ ನಂಬಿಕೆಯಿಡುವ ಯಾವನಾದರೂ
ಆಶಾಭಂಗಪಡುವದಿಲ್ಲವೆಂದು ಶಾಸ್ತ್ರವು ಹೇಳುತ್ತದೆಯೆಷ್ಟೆ. [12]ಈ ವಿಷಯದಲ್ಲಿ
ಯೆಹೂದ್ಯನಿಗೂ ಗ್ರೀಕನಿಗೂ ಹೆಚ್ಚುಕಡಿಮೆ ಏನೂ ಇಲ್ಲ. ಎಲ್ಲರಿಗೂ ಒಬ್ಬನೇ ಕರ್ತ; ಆತನು
ತನ್ನ ನಾಮವನ್ನು ಹೇಳಿಕೊಳ್ಳುವವರಿಗೆ ಹೇರಳವಾಗಿ ಕೊಡುವವನಾಗಿದ್ದಾನೆ. [13]ಕರ್ತನ
ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದೆಂದು ಬರೆದದೆ.**

**ವಚನ 5.** ಮುಂದೆ ಸಾಗುತ್ತಾ, ಪೌಲನು ಪುನಃ ಧರ್ಮಶಾಸ್ತ್ರ ಕೈಕೊಂಡು ನಡೆಯುವ ಮೂಲಕ ನೀತಿಯನ್ನು ದೊರಕಿಸಿಕೊಳ್ಳಲು ಪ್ರಯತ್ನಿಸುವದರ ಘಾತಕ ದೋಷವನ್ನು ಎತ್ತಿತೋರಿಸುತ್ತಾನೆ. ಆತನು ಹೀಗೆ ಬರೆದನು, **ನೇಮನಿಷ್ಠೆಗಳಿಂದಾಗುವ ನೀತಿಯ ವಿಷಯದಲ್ಲಿ—ಅದನ್ನು ಅನುಸರಿಸಿದವನೇ ಅದರಿಂದ ಜೀವಿಸುವನೆಂದು ಮೋಶೆಯು ಬರೆಯುತ್ತಾನೆ.** ಪೌಲನು ಮನಸ್ಸಿನಲ್ಲಿ ಯಾಜಕಕಾಂಡ 18:5ನ್ನು ಹೊಂದಿದ್ದನೆಂದು ತೋರುತ್ತದೆ, ಅಲ್ಲಿ ಯೆಹೋವನು ಇಸ್ರಾಯೇಲ್ಯರಿಗೆ, "ನನ್ನ ಆಜ್ಞಾವಿಧಿಗಳ ಪ್ರಕಾರ ನಡೆದುಕೊಳ್ಳುವವರು ಆ ಆಜ್ಞಾವಿಧಿಗಳ ಮೂಲಕ ಬದುಕುವರು. ಆದದರಿಂದ ನೀವು ಅವುಗಳನ್ನು ಅನುಸರಿಸಬೇಕು" ಎಂದು ಹೇಳುತ್ತಾನೆ. ಯಾಜಕಕಾಂಡ 18:5ರಲ್ಲಿ "ಬದುಕುವರು" ಎಂಬುದು ಮತ್ತು ರೋಮಾ 10:5ರಲ್ಲಿನ "ಜೀವಿಸುವನೆಂದು" ಎಂಬವುಗಳೆರಡೂ "ಜೀವವನ್ನು ಕಂಡುಕೊಳ್ಳುವನು" ಎಂಬರ್ಥವನ್ನು ಕೊಡುತ್ತವೆ. JB ತರ್ಜುಮೆಯಲ್ಲಿ "ಆಜ್ಞಾವಿಧಿಗಳನ್ನು ಕೈಕೊಂಡು ನಡೆಯುವವರು ಅವುಗಳಿಂದ ಜೀವವನ್ನು ಸೆಳೆದುಕೊಳ್ಳುವರು" ಎಂದಿರುತ್ತದೆ.

ದೇವರು ಇಸ್ರಾಯೇಲ್ಯರಿಗೆ ಅವರು ಆತನ ಆಜ್ಞಾವಿಧಿಗಳನ್ನು ಅನುಸರಿಸಿದರೆ ಜೀವವನ್ನು ಕಂಡುಕೊಳ್ಳುವರೆಂದು ಹೇಳಿದನು. ಜೀವವನ್ನು ಕಂಡುಕೊಳ್ಳುವದು ಹಿತವೆಂದು

ತೋರುತ್ತದೆ—ಹಾಗಾದರೆ ಸಮಸ್ಯೆಯು ಏನಾಗಿತ್ತು? ಸಮಸ್ಯೆಯು ಏನೆಂದರೆ, ಧರ್ಮಶಾಸ್ತ್ರವನ್ನು ಕೈಕೊಳ್ಳುವ ಮೂಲಕ ಜೀವವನ್ನು ಕಂಡುಕೊಳ್ಳಲು, ಅವರು ಧರ್ಮಶಾಸ್ತ್ರವನ್ನು *ಪರಿಪೂರ್ಣವಾಗಿ* ಕೈಕೊಂಡು ನಡೆಯಬೇಕಾಗಿತ್ತು. ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದಕ್ಕೆ ಯಾವನಾದರೂ ವಿಫಲನಾದರೆ ಅಂತವನು ಶಾಪಗ್ರಸ್ಥನಾಗುತ್ತಿದ್ದನು (ನೋಡಿರಿ ಧರ್ಮೋಪದೇಶಕಾಂಡ 27:26; ಗಲಾತ್ಯ 3:12, 13). CEV ಯು ಮೋಶೆಯ ಮಾತುಗಳನ್ನು ರೋಮಾ 10:5ರಲ್ಲಿ ಹೀಗೆ ಅನುವಾದಿಸುತ್ತದೆ: "ನೀವು ಬದುಕಬೇಕೆಂದು ಇಚ್ಛಿಸುವದಾದರೆ, ನೀವು ಧರ್ಮಶಾಸ್ತ್ರವು ಹೇಳುವದನ್ನ*ೆಲ್ಲಾ* ಮಾಡತಕ್ಕದ್ದು" (ಒತ್ತಿ ಹೇಳಿದ್ದು ನನ್ನದು). ಹೇಗೂ, ಯಾರೊಬ್ಬನಿಗೂ ಎಲ್ಲಾ ಆಜ್ಞೆಗಳನ್ನು ಎಲ್ಲಾ ಸಮಯಗಳಲ್ಲಿಯೂ ಲೋಪವಿಲ್ಲದಂತೆ ಕೈಕೊಂಡು ನಡೆಯುವದಕ್ಕೆ ಸಾಧ್ಯವಿರಲಿಲ್ಲ. ಈ ಕಾರಣಕ್ಕಾಗಿ, ಧರ್ಮಶಾಸ್ತ್ರ/ಕ್ರಿಯೆಗಳ ವ್ಯವಸ್ಥೆಯ ಆಧಾರದಲ್ಲಿ ನೀತಿಯನ್ನು ದೊರಕಿಸಿಕೊಳ್ಳುವದು *ಅಸಾಧ್ಯ*ವಾದದ್ದಾಗಿತ್ತು.

**ವಚನಗಳು 6-8.** ಅದಕ್ಕೆ ತದ್ವಿರುದ್ಧವಾಗಿ, ದೇವರ ಕೃಪೆ/ನಂಬಿಕೆಯ ವ್ಯವಸ್ಥೆಯ ಆಧಾರದಲ್ಲಿ ನೀತಿಯನ್ನು ದೊರಕಿಸಿಕೊಳ್ಳುವದು *ಸಾಧ್ಯ* ಆಗಿತ್ತು. 6 ರಿಂದ 8 ವಚನಗಳ ಸಂದೇಶವು ಅದೇ ಆಗಿರುತ್ತದೆ—ಮೊದಲ ಶತಮಾನದ ಯೆಹೂದ್ಯರಿಗೆ ಪರಿಚಿತವಾಗಿದ್ದಂಥ ಆದರೆ ನಮಗೆ ಅಪರಿಚಿತವಾಗಿರುವಂಥ ಮಾತುಗಳನ್ನು ಉಪಯೋಗಿಸುವ ಒಂದು ಸಂದೇಶ.

6ನೇ ವಚನವು ಹೀಗೆ ಆರಂಭಗೊಳ್ಳುತ್ತದೆ, **ಆದರೆ ನಂಬಿಕೆಯಿಂದುಂಟಾಗುವ** [ಕೃಪೆ/ನಂಬಿಕೆಯ ವ್ಯವಸ್ಥೆ] **ನೀತಿಯು** [ದೇವರ ಸಂಗಡ ಸರಿಯಾದ ಸಂಬಂಧ ಹೊಂದಿರುವಿಕೆ] **ಏನು ಹೇಳುತ್ತದೆ?** ಮೋಶೆಯು ಧರ್ಮಶಾಸ್ತ್ರ/ಕ್ರಿಯೆಗಳ ವ್ಯವಸ್ಥೆಯ ಬಗ್ಗೆ ಮಾತಾಡುವ ವಿಷಯವಾಗಿ ಪೌಲನು ಈಗಷ್ಟೆ ಸೂಚಿಸಿದ್ದನು (10:5). ಈಗ ಆತನು ನೀತಿಯನ್ನು ಕೃಪೆ/ನಂಬಿಕೆಯ ವ್ಯವಸ್ಥೆಯ ವಕ್ತಾರನೆಂಬಂತೆ ಮೂರ್ತೀಕರಿಸುತ್ತಾನೆ. "ನಂಬಿಕೆಯಿಂದುಂಟಾಗುವ ನೀತಿಯು ಏನು ಹೇಳುತ್ತದೆ"? ಕೇಳಿಸಿಕೊಳ್ಳಿರಿ:

> **ಕ್ರಿಸ್ತನನ್ನು ಕೆಳಕ್ಕೆ ಕರೆದುಕೊಂಡು ಬರುವದಕ್ಕೆ ಯಾರು ಮೇಲಣ ಲೋಕಕ್ಕೆ ಏರಿ ಹೋದಾರು? ಎಂದಾಗಲಿ ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿಕೊಂಡು ಬರುವದಕ್ಕೆ ಯಾರು ಪ್ರೇತಲೋಕಕ್ಕೆ ಇಳಿದುಹೋದಾರು? ಎಂದಾಗಲಿ ಮನಸ್ಸಿನಲ್ಲಿ ಅಂದುಕೊಳ್ಳಬೇಡ. ದೇವರ ವಾಕ್ಯವು ನಿನ್ನ ಸಮೀಪದಲ್ಲಿಯೇ ಇದೆ; ಅದು ನಿನ್ನ ಬಾಯಲ್ಲಿಯೂ ನಿನ್ನ ಹೃದಯದಲ್ಲಿಯೂ ಇದೆ ಅನ್ನುತ್ತದೆ. ಆ ವಾಕ್ಯವು ನಾವು ಸಾರುವ ನಂಬಿಕೆಯ ವಿಷಯವಾದ ವಾಕ್ಯವೇ.**

ಪೌಲನು ಧರ್ಮೋಪದೇಶಕಾಂಡ 30ರಲ್ಲಿನ ಮಾತುಗಳನ್ನು ಉಪಯೋಗಿಸುತ್ತಿದ್ದಾನೆ, ಅದು ಇಸ್ರಾಯೇಲ್ಯರಿಗೆ ಮೋಶೆಯು ನೀಡುವ ವಿದಾಯ ಭಾಷಣದ ಭಾಗವಾಗಿರುತ್ತದೆ:

> ನಾನು ಈಗ ನಿಮಗೆ ಬೋಧಿಸಿದ ಧರ್ಮೋಪದೇಶವು ನಿಮಗೆ ಗ್ರಹಿಸುವದಕ್ಕೆ ಕಷ್ಟವಾದದ್ದೂ ಅಲ್ಲ, ಹೊಂದುವದಕ್ಕೆ ಅಸಾಧ್ಯವಾದದ್ದೂ ಅಲ್ಲ. ಇದು ಮೇಲಣ ಲೋಕದಲ್ಲಿರುವ ಮಾತಲ್ಲ. *ನಮಗೋಸ್ಕರ ಮೇಲಣ ಲೋಕವನ್ನು ಏರಿ* ಅದನ್ನು ತಿಳಿದುಕೊಂಡುಬಂದು ನಮಗೆ ತಿಳಿಸುವಷ್ಟು *ಶಕ್ತರು ಯಾರಿದ್ದಾರೆ*? ಇದ್ದರೆ ನಾವು ಕೇಳಿ ಕೈಕೊಂಡೇವು ಅಂದುಕೊಳ್ಳುವದಕ್ಕೆ ಅವಕಾಶವೇನೂ ಇಲ್ಲ. ಮತ್ತು ಇದು ಸಮುದ್ರದ

ಆಚೆ ಇರುವ ಮಾತಲ್ಲ. ನಮಗೋಸ್ಕರ ಸಮುದ್ರವನ್ನು ದಾಟಿ ಅದನ್ನು ತೆಗೆದುಕೊಂಡು ಬಂದು ನಮಗೆ ತಿಳಿಸುವಷ್ಟು ಶಕ್ತರು ಯಾರಿದ್ದಾರೆ? ಇದ್ದರೆ ನಾವು ಕೈಕೊಂಡೇವು ಅಂದುಕೊಳ್ಳುವದಕ್ಕೆ ಆಸ್ಪದವೇನೂ ಇಲ್ಲ. ಈ ವಾಕ್ಯವು ನಿಮಗೆ ಸಮೀಪದಲ್ಲಿಯೇ ಇದೆ; ನಿಮ್ಮ ಬಾಯಲ್ಲಿಯೂ ಹೃದಯದಲ್ಲಿಯೂ ಇದೆ; ಇದನ್ನು ಅನುಸರಿಸುವದಕ್ಕೆ ಅವಕಾಶವುಂಟಷ್ಟೆ (ಧರ್ಮೋಪದೇಶಕಾಂಡ 30:11-14; ಒತ್ತಿ ಹೇಳಿದ್ದು ನನ್ನದು).

"ಸಮುದ್ರ" ಎಂಬುದರ ಬದಲಾಗಿ ಪೌಲನು "ಪ್ರೇತಲೋಕ" "abyss" ಎಂದು ಉಪಯೋಗಿಸುತ್ತಾನೆ. "Abyss" ಎಂಬುದು ἄβυσσος (*abussos*) ಎಂಬುದರ ಲಿಪ್ಯಂತರಣವಾಗಿರುತ್ತದೆ, ಅದರರ್ಥವು "ಅಧೋಲೋಕ."[6] ಗ್ರೀಕ್ ಹಳೆಯ ಒಡಂಬಡಿಕೆಯಲ್ಲಿ, "ಪ್ರೇತಲೋಕ" ("ತಟ್ಟತಳ") ಎಂಬುದು ಅನೇಕ ಸಾರಿ ನೀರಿನ ಹೆಗ್ಗಡಲುಗಳೊಂದಿಗೆ ಸಂಬಂಧಿಸಲ್ಪಟ್ಟಿರುತ್ತದೆ (ನೋಡಿರಿ ಕೀರ್ತನೆ 68:22). 10:7ರಲ್ಲಿ, KJV ಯು "ಆಗಾಧಕ್ಕೆ ಇಳಿದು ಹೋಗುವವರು ಯಾರು?" ಎಂದು ಹೇಳುತ್ತದೆ (ನೋಡಿರಿ NIV). ಪೌಲನ ಅನ್ವಯಿಸುವಿಕೆಯು ಕ್ರಿಸ್ತನ ಪುನರುತ್ಥಾನಕ್ಕೆ ಆಗಿತ್ತಾದ್ದರಿಂದ, ಆತನು ಮನಸ್ಸಿನಲ್ಲಿ ಬಹುಶ: ಸತ್ತವರ ನಿವಾಸಸ್ಥಳ (NLT) ವನ್ನು ಅಥವಾ ಸಮಾಧಿಯನ್ನು (McCord) ಹೊಂದಿದ್ದನೆಂದು ತೋರುತ್ತದೆ. ನಿಖರವಾದ ಅರ್ಥನಿರೂಪನೆಯು ಇಲ್ಲಿ ಪ್ರಾಮುಖ್ಯವಾಗಿರುವದಿಲ್ಲ. ಒಬ್ಬನು ಎಷ್ಟೊಂದು ಎತ್ತರಕ್ಕೆ ಏರಬಲ್ಲನೆಂಬುದನ್ನು ಸೂಚಿಸಲು "ಮೇಲಣ ಲೋಕ" ಎಂದು ಪೌಲನು ಉಪಯೋಗಿಸಿದನು ಮತ್ತು ಒಬ್ಬನು ಎಷ್ಟೊಂದು ಕೆಳಕ್ಕೆ ಇಳಿಯಬಲ್ಲನೆಂಬುದನ್ನು ಸೂಚಿಸಲು "ಪ್ರೇತಲೋಕ" ಎಂಬುದನ್ನು ಉಪಯೋಗಿಸುತ್ತಾನೆ.

ಪೌಲನು "ಪ್ರೇತಲೋಕ" ಎಂಬ ಪದವನ್ನು ಪರ್ಯಾಯವಾಗಿ ಉಪಯೋಗಿಸಿದ್ದನ್ನು ಬಿಟ್ಟರೆ ಉಳಿದಂತೆ ಧರ್ಮೋಪದೇಶಕಾಂಡ 30:11-14ರಲ್ಲಿನ ಪರಿಭಾಷೆಯನ್ನು ಹೆಚ್ಚುಕಡಿಮೆ ನಕಲು ಮಾಡಿರುತ್ತಾನೆ. ಹೇಗೂ, ಆತನು ತನ್ನ ಸ್ವಂತ ಉದ್ದೇಶಕ್ಕಾಗಿ ಈ ಅನ್ವಯಿಕೆಗಳನ್ನು ಸೇರ್ಪಡೆಗೊಳಿಸುವ ಮೂಲಕ ಪದಗಳನ್ನು ಅಳವಡಿಸಿಕೊಂಡನು: "ಕ್ರಿಸ್ತನನ್ನು ಕೆಳಕ್ಕೆ ಕರೆದುಕೊಂಡು ಬರುವದಕ್ಕೆ" ಮತ್ತು "ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿಕೊಂಡು ಬರುವದಕ್ಕೆ." ಪೌಲನು ಹಳೆಯ ಒಡಂಬಡಿಕೆಯ ಪದೋಪಯೋಗದ ಜೊತೆಗೆ ತನ್ನದೇ ಆದ ಅನ್ವಯಿಕೆಗಳನ್ನು ಜೋಡಿಸುವ ಮೂಲಕ ಯಾವ ಸಂದೇಶವನ್ನು ತಿಳಿಯಪಡಿಸುವ ಇಂಗಿತವನ್ನು ಹೊಂದಿದ್ದನು? ಬಹುಶಃ ಕೀಲಿಕೈಯು ಧರ್ಮೋಪದೇಶಕಾಂಡ 30:11-14ರ ಪ್ರಾರಂಭಿಕ ಮಾತುಗಳಲ್ಲಿ ಸಿಕ್ಕುತ್ತದೆ: "ನಾನು ಈಗ ನಿಮಗೆ ಬೋಧಿಸಿದ ಧರ್ಮೋಪದೇಶವು [1] ನಿಮಗೆ ಗ್ರಹಿಸುವದಕ್ಕೆ ಕಷ್ಟವಾದದ್ದೂ ಅಲ್ಲ, [2] ಹೊಂದುವದಕ್ಕೆ ಅಸಾಧ್ಯವಾದದ್ದೂ ಅಲ್ಲ (ವಚನ.11).

ರೋಮಾ 10:6-8ರಲ್ಲಿ, ಪೌಲನ ಸಂದೇಶದ ಮೊದಲ ಭಾಗವು ಏನೆಂದರೆ ಸುವಾರ್ತೆ ಬೇಡಿಕೆಗಳು ಅತಿ ಕಷ್ಟಕರವಾದವುಗಳೆನಲ್ಲ ಎಂಬುದೆ. Leon Morris ಪ್ರಕಾರವಾಗಿ, ಪೌಲನು "ಅಸಾಧ್ಯವಾದದ್ದನ್ನು ಸೂಚಿಸುವದಕ್ಕೆ ನಾನ್ನುಡಿಯಂತಾಗಿದ್ದ ಮಾತುಗಳನ್ನು ಉಪಯೋಗಿಸುತ್ತಿದ್ದಾನೆ."[7] ದೇವರು ನಮಗೆ ಮೇಲಣ ಲೋಕಕ್ಕೆ ಏರಿ ಹೋಗಿ ಕ್ರಿಸ್ತನನ್ನು ಕೆಳಕ್ಕೆ ಕರೆದುಕೊಂಡು ಬರುವಂತಹ ಅಥವಾ ಪ್ರೇತಲೋಕಕ್ಕೆ ಇಳಿದು ಹೋಗಿ ಕ್ರಿಸ್ತನನ್ನು ಮೇಲಕ್ಕೆ ಕರೆಕೊಂಡು ಬರುವಂತಹ ಮನುಷ್ಯಶಕ್ತಿಗೆ ಮೀರಿದ ಕಾರ್ಯಗಳನ್ನು ಮಾಡುವಂತೆ ಆಜ್ಞಾಪಿಸುವದಿಲ್ಲ. ನಾವು ಕೇವಲ ವಿಶ್ವಾಸವಿಡುವಂತೆ ಮತ್ತು ನಮ್ಮ ನಂಬಿಕೆಯನ್ನು ವ್ಯಕ್ತಪಡಿಸುವಂತೆ ಕೇಳಲ್ಪಟ್ಟಿದ್ದೇವಷ್ಟೆ (ಮಾರ್ಕ 16:16).

10:6-8ರಲ್ಲಿನ ಪೌಲನ ಸಂದೇಶದ ಎರಡನೆಯ ಭಾಗವು ಮೊದಲನೆಯ ಭಾಗಕ್ಕೆ ಸಂಬಂಧಿಸಿತ್ತದೆ: ಯಾವನಿಗಾದರೂ ನೀತಿಯನ್ನು ಹೊಂದುವದು ಕೈಗೆಟುಕಲಾರದ್ದಾಗಿರುವದಿಲ್ಲ—ಯಾಕೆಂದರೆ ಎಲ್ಲರೂ ಕರ್ತನಲ್ಲಿ ಮತ್ತು ಆತನ ಮಾರ್ಗದಲ್ಲಿ ವಿಶ್ವಾಸವಿಡುವದಕ್ಕೆ ಶಕ್ತರೇ.[8] ಪೌಲನು ಯೆಹೂದ್ಯರಿಗೆ "ವಾಕ್ಯವು ನಿನ್ನ ಸಮೀಪದಲ್ಲಿಯೇ ಇದೆ" ಎಂದು ಭರವಸೆಯನ್ನು ನೀಡುವದಕ್ಕೆ ಶಕ್ತನಾಗಿದ್ದನು ಯಾಕೆಂದರೆ, ಆತನು ಹೊಸ ಸ್ಥಳಗಳಿಗೆ ಹೋಗುವಾಗಲೆಲ್ಲಾ, ಸುವಾರ್ತೆಯನ್ನು ಆಲಿಸುವ ಮೊದಲ ಸಂದರ್ಭವನ್ನು ಯೆಹೂದ್ಯರಿಗೆ ಕೊಡುತ್ತಿದ್ದನು (ಅಪೊಸ್ತಲರ ಕೃತ್ಯಗಳು 13:14; 14:1; 17:1; 18:19; ನೋಡಿರಿ ರೋಮಾ 1:16).

ರೋಮಾ 10:6-8 ಮೂಲಭೂತ ಸಂದೇಶವು ಅದೇ ಆಗಿರುತ್ತದೆ; ಆದರೆ, ನಾನು ಪೌಲನ ಅನ್ವಯಿಸುವಿಕೆಯ ಮಾತುಗಳನ್ನು ಓದಿದಾಗ, ಅವುಗಳು ಯೆಹೂದ್ಯರ ಅಪನಂಬಿಕೆಯನ್ನು ಪ್ರತಿಬಿಂಬಿಸುತ್ತವೆಂಬ ಕಾರಣಕ್ಕೆ ಆ ಎರಡು ನಿರ್ದಿಷ್ಟವಾದ ಅಸಾಧ್ಯ ಕೆಲಸಗಳನ್ನು ಆರಿಸಿಕೊಂಡನೋ ಎಂದು ಚಕಿತಗೊಳ್ಳುತ್ತೇನೆ. ಯೆಹೂದ್ಯರು ಯೇಸುವನ್ನು ಮೆಸ್ಸೀಯನೆಂದು ಅಂಗೀಕರಿಸಲಿಲ್ಲವಾದ್ದರಿಂದ, ಮೆಸ್ಸೀಯನು ಪರಲೋಕದಿಂದ ಕೆಳಕ್ಕೆ ಕರಕೊಂಡು ಬರಲ್ಪಟ್ಟಿದ್ದನೆಂಬುದನ್ನು (ಅಂದರೆ ಆತನು ನಿಜವಾಗಿಯೂ ಬಂದಿದ್ದನೆಂಬುದನ್ನು) ಅವರು ನಂಬಲಿಲ್ಲ. ಅಷ್ಟುಮಾತ್ರವಲ್ಲದೆ, ಯೇಸುವು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಿದ್ದೇನೆಂಬುದನ್ನು ನಂಬಲಿಲ್ಲ. ಮೆಸ್ಸೀಯನನ್ನು ಕರೆದುಕೊಂಡು ಬರುವದಕ್ಕೆ ಯಾವನೂ ಪರಲೋಕಕ್ಕೆ ಏರಿಹೋಗುವ ಅಗತ್ಯವೇ ಇರಲಿಲ್ಲ, ಯಾಕೆಂದರೆ ಆತನು ಈಗಾಗಲೇ ಬಂದಿದ್ದನು ಎಂಬುದಾಗಿ ಪೌಲನು ದೃಢಪಡಿಸುವಿಕೆಯಾಗಿರುತ್ತದೆ ಎಂಬದಾಗಿ 6 ಮತ್ತು 7 ವಚನಗಳನ್ನು ಕಾಣಬಹುದಾಗಿದೆ. ಅಲ್ಲದೆ ಕ್ರಿಸ್ತನನ್ನು ಮೇಲಕ್ಕೆ ಕರೆದುಕೊಂಡು ಬರುವದಕ್ಕೆ ಯಾವನೂ ಪ್ರೇತಲೋಕಕ್ಕೆ ಇಳಿದುಹೋಗುವದೂ ಅಗತ್ಯವಿರಲಿಲ್ಲ, ಯಾಕೆಂದರೆ ಆತನು ಈಗಾಗಲೇ ಜೀವಿತನಾಗಿ ಎಬ್ಬಿಸಲ್ಪಟ್ಟಿದ್ದನು.

ಧರ್ಮೋಪದೇಶಕಾಂಡ 30:11-14 ಈ ಟಿಪ್ಪಣಿಯೊಂದಿಗೆ ಮುಕ್ತಾಯಗೊಳ್ಳುತ್ತದೆ: "ಈ ವಾಕ್ಯವು ನಿಮಗೆ ಸಮೀಪದಲ್ಲಿಯೇ ಇದೆ; ಇದು ನಿಮ್ಮ ಬಾಯಲ್ಲಿಯೂ ಹೃದಯದಲ್ಲಿಯೂ ಇದೆ; *ಇದನ್ನು ಅನುಸರಿಸುವದಕ್ಕೆ ಅವಕಾಶವುಂಟಷ್ಟೆ*" (ವಚನ 14; ಒತ್ತಿ ಹೇಳಿದ್ದು ನನ್ನದು). "ದೇವರ ಚಿತ್ತವು . . . ಇಸ್ರಾಯೇಲ್ಯರಿಗೆ ಸರಳವಾದ ರೀತಿಯಲ್ಲಿ ಪ್ರಕಟಿಸಲ್ಪಟ್ಟಿದೆ" ([ಧರ್ಮೋಪದೇಶಕಾಂಡ] 29:29) ಎಂಬದನ್ನು ಮೋಶೆ ಸ್ಪಷ್ಟಗೊಳಿ ಸಿದನು. ಆದ್ದರಿಂದ, "ಇಸ್ರಾಯೇಲ್‌ದ *ಬಾಯಲ್ಲಿಯೂ* ಮತ್ತು ತಿಳಿವಳಿಕೆಯಲ್ಲಿಯೂ (*ಹೃದಯದಲ್ಲಿಯೂ*) ಇರುವದಾಗಿದ್ದು, ಅದು ಅನುಸರಿಸಿ ನಡೆಯಬೇಕಾದ ಒಂದು ಸಂಗತಿಯಾಗಿತ್ತು: *ನೀವು ಅದನ್ನು ಮಾಡುವದಕ್ಕೆ ಶಕ್ತರು*."[9] ಪೌಲನು ಧರ್ಮಶಾಸ್ತ್ರದ ಕುರಿತಾಗಿ ಮೋಶೆಯು ಹೇಳಿದ ಮಾತುಗಳನ್ನು ತೆಗೆದುಕೊಂಡು ಅವುಗಳನ್ನು ಸುವಾರ್ತೆಗೆ ಅನ್ವಯಿಸುತ್ತಾನೆ. ಖಂಡಿತವಾಗಿಯೂ, ಸುವಾರ್ತೆಯು ಯೆಹೂದ್ಯರ ಬಾಯಲ್ಲಿಯೂ ಹೃದಯದಲ್ಲಿಯೂ ಇತ್ತೆಂಬದಾಗಿ ಪೌಲನು ಹೇಳುತ್ತಿಲ್ಲ, ಆದರೆ ಅದು *ಇರಬಲ್ಲದು* ಮತ್ತು *ಇರತಕ್ಕದ್ದು* ಎಂಬದಾಗಿಯಂತೂ ಹೇಳುತ್ತಿದ್ದಾನೆ. ಆತನು ಸುವಾರ್ತೆಯು ಸುಲಭವಾಗಿ ಸಂಪರ್ಕಕ್ಕೆ ಸಿಕ್ಕುತ್ತದೆ ಮತ್ತು ಲಭ್ಯವಾಗಿರುತ್ತದೆ ಎಂಬುದನ್ನು ಒತ್ತಿ ಹೇಳುತ್ತಿದ್ದಾನೆ.

ಸುವಾರ್ತೆಯ ಕ್ಲುಪ್ತವಾದ ಚರ್ಚೆಗೆ ನಡಿಸುವದಕ್ಕಾಗಿ ಪೌಲನು ಮೋಶೆಯ ಮಾತುಗಳನ್ನು ಉಪಯೋಗಿಸಿದನು. "ಆದರೆ [ನಂಬಿಕೆಯಿಂದುಂಟಾಗುವ ನೀತಿಯು] ಏನು ಹೇಳುತ್ತದೆ? 'ದೇವರ ವಾಕ್ಯವು ನಿನ್ನ ಸಮೀಪದಲ್ಲಿಯೇ ಇದೆ; ಅದು ನಿನ್ನ ಬಾಯಲ್ಲಿಯೂ ನಿನ್ನ ಹೃದಯದಲ್ಲಿಯೂ ಇದೆ' ಅನ್ನುತ್ತದೆ. ಆ ವಾಕ್ಯವು ನಾವು ಸಾರುವ ನಂಬಿಕೆಯ ವಿಷಯವಾದ ವಾಕ್ಯವೇ" (10:8). "ನಂಬಿಕೆಯ ವಿಷಯವಾದ ವಾಕ್ಯವೇ" ನಂಬಿಕೆಯನ್ನು ಉಂಟುಮಾಡುವ ವಾಕ್ಯವಾಗಿದೆ (10:17) ಮತ್ತು "ನಂಬಿಕೆಯ ಪ್ರತಿಸ್ಪಂದನೆಯ ಅಗತ್ಯವಿರುವ ಸಂದೇಶವಾಗಿರುತ್ತದೆ, ಅಂದರೆ ಸುವಾರ್ತೆ"[10] (ನೋಡಿರಿ ರೋಮ 1:16).

**ವಚನ 9.** "ನಂಬಿಕೆಯ ವಿಷಯವಾದ ವಾಕ್ಯವೇ" ಎಂಬುದರಲ್ಲಿರುವ ಅಂತರಾರ್ಥ ಏನು? ನಾವು ದೇವರ ಕೃಪೆ ಮತ್ತು ಯೇಸುವಿನ ಮರಣದ ಬಗ್ಗೆ ಓದುವದನ್ನು ನಿರೀಕ್ಷಿಸಬಹುದು. ಬದಲಾಗಿ, ಪೌಲನು ಧರ್ಮೋಪದೇಶಕಾಂಡ 10:14 ಮಾತುಗಳಿಂದ ಪ್ರೇರಣೆ ಪಡೆದು ದೇವರ ಪ್ರೀತಿಗೆ ಮನುಷ್ಯನ ಪ್ರತಿಸ್ಪಂದನೆ ಏನಾಗಿರಬೇಕೆಂಬದನ್ನು ತಿಳಿಸುತ್ತಾನೆ: **ಅದೇನಂದರೆ ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ**[11] **ನಿನಗೆ ರಕ್ಷಣೆಯಾಗುವದು ಎಂಬದೇ.** 10:1ರಲ್ಲಿ, ತಾನು ಇಸ್ರಾಯೇಲ್ಯರ ರಕ್ಷಣೆಗೋಸ್ಕರ ಪ್ರಾರ್ಥಿಸುತ್ತಿದ್ದೇನೆಂದು ಪೌಲನು ಹೇಳಿದ್ದನು. ಈಗ ಅವರು ಹೇಗೆ ರಕ್ಷಣೆ ಹೊಂದುವದಕ್ಕೆ ಸಾಧ್ಯ ಎಂಬುದನ್ನು ಹೇಳಿದನು: ಬಾಯಿಂದ ಅರಿಕೆ ಮಾಡಿ ಹೃದಯದಿಂದ ನಂಬುವದರ ಮೂಲಕವೇ. ಕಾಲಗಣನ ಶಾಸ್ತ್ರಕ್ಕನುಸಾರದ ಶ್ರೇಣಿಯಲ್ಲಿ ನೋಡುವದಾದರೆ ಮೊದಲು ಹೃದಯದಲ್ಲಿ ನಂಬುವದು ಬಂದರೆ ನಂತರವಷ್ಟೆ ಬಾಯಿಂದ ಅರಿಕೆ ಮಾಡುವದು ಇರುತ್ತದೆ, ಆದರೆ ಪೌಲನು ಧರ್ಮೋಪದೇಶಕಾಂಡ 30:14ರಲ್ಲಿ ಮೋಶೆಯು ಉಪಯೋಗಿಸಿದ ಶ್ರೇಣಿಯನ್ನು ಪ್ರತಿಬಿಂಬಿಸುತ್ತಿದ್ದಾನೆ. ಆ ವಾಕ್ಯಭಾಗದಲ್ಲಿ, "ನಿಮ್ಮ ಹೃದಯದಲ್ಲಿಯೂ" ಎಂಬುದಕ್ಕೆ ಮುಂಚೆ "ನಿಮ್ಮ ಬಾಯಲ್ಲಿಯೂ" ಎಂಬುದಾಗಿ ಇರುತ್ತದೆ. ಪೌಲನು 10ನೇ ವಚನದಲ್ಲಿ ಆ ಕಾಲಗಣನ ಶಾಸ್ತ್ರಕ್ಕನುಸಾರದ ಶ್ರೇಣಿಗೆ ಮರಳುತ್ತಾನೆ.

ರೋಮಾ 10:9ನೇ ವಚನವು ಸುವಾರ್ತೆಯ ಎರಡು ಅನಿವಾರ್ಯವಾದ ಮತ್ತು ಭರಿಸಲಾಗದಂತಹ ಅಂಶಗಳನ್ನು ಸ್ಪರ್ಶಿಸುತ್ತಾನೆ: ದೇವರು ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದನೆಂಬ ವಾಸ್ತವಾಂಶ (1 ಕೊರಿಂಥ 15:4) ಮತ್ತು ಯೇಸುವು ಕರ್ತನಾಗಿದ್ದಾನೆ ಎಂಬ ವಾಸ್ತವಾಂಶ (ಕೊಲೊಸ್ಸೆ 2:6). "ಕರ್ತನು" (κύριος, *kurios*) ಎಂಬುದು ಇಲ್ಲಿ ದೇವತ್ವದ ಭಾವಾರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. LXXವು *kurios* ಎಂಬ ಪದವನ್ನು ದೇವರ ಪವಿತ್ರ ಹೆಸರನ್ನು ಸೂಚಿಸುವದಕ್ಕಾಗಿ ಆರು ಸಾವಿರ ಸಾರಿ ಉಪಯೋಗಿಸಿರುತ್ತದೆ.[12] ಮೊದಲ ಸುವಾರ್ತೆಯ ಪ್ರಸಂಗದಲ್ಲಿ, ಪೇತ್ರನು ಈ ಎರಡು ಬಹು ಮುಖ್ಯ ವಿಚಾರಗಳನ್ನು ಸೇರ್ಪಡೆಗೊಳಿಸಿದನು. "ಆತನನ್ನು [ಯೇಸು] *ದೇವರು* ಮರಣವೇದನೆಗಳಿಂದ *ಬಿಡಿಸಿ ಎಬ್ಬಿಸಿದನು*; ಯಾಕೆಂದರೆ ಮರಣವು ಆತನನ್ನು ಹಿಡುಕೊಂಡಿರುವದು ಅಸಾಧ್ಯವಾಗಿತ್ತು" ಎಂದು ಘೋಷಿಸಿದನು (ಅಪೊಸ್ತಲರ ಕೃತ್ಯಗಳು 2:24; ಒತ್ತಿ ಹೇಳಿದ್ದು ನನ್ನದು). ಬಳಿಕ, ಆತನು ತನ್ನ ಪ್ರಸಂಗದ ಅಂತ್ಯಕ್ಕೆ ತಲುಪುತ್ತಿದ್ದ ಹಾಗೆ, ಆತನು ಈ ಮುಕ್ತಾಯಕ್ಕೆ ಬರುತ್ತಾನೆ: "ಆದದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು *ಒಡೆಯನನ್ನಾಗಿಯೂ* ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬುದು

ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ" (ಅಪೊಸ್ತಲರ ಕೃತ್ಯಗಳು 2:36; ಒತ್ತಿ ಹೇಳಿದ್ದು ನನ್ನದು).

**ವಚನ 10.** ಈ ಸತ್ಯಗಳನ್ನು ನಂಬುವುದರ ಮತ್ತು ಅರಿಕೆ ಮಾಡುವುದರ ಪ್ರಾಮುಖ್ಯತೆಗೆ 10ನೇ ವಚನದಲ್ಲಿ ಮತ್ತಷ್ಟು ಶಕ್ತಿತುಂಬಲ್ಪಟ್ಟಿದೆ, ಅದು ಆ ಎರಡು ಸತ್ಯಗಳನ್ನು ಸ್ವಾಭಾವಿಕವಾದ (ಕಾಲಗಣನ ಶಾಸ್ತ್ರಕ್ಕನುಸಾರವಾಗಿ) ಶ್ರೇಣಿಯಲ್ಲಿ ಮುಂದಿಡುತ್ತದೆ: **ಹೃದಯದಿಂದ ನಂಬುವದರ ಮೂಲಕ ನೀತಿಯು ದೊರಕುತ್ತದೆ, ಬಾಯಿಂದ ಅರಿಕೆಮಾಡುವದರ ಮೂಲಕ ರಕ್ಷಣೆಯಾಗುತ್ತದೆ.** "ನೀತಿಯು" (ದೇವರ ಸಂಗಡ ಸರಿಯಾದ ಸಂಬಂಧದಲ್ಲಿರುವದು) ಮತ್ತು "ರಕ್ಷಣೆ" ಎಂಬುವುಗಳು ಈ ವಚನದಲ್ಲಿ ವಿನಿಮೇಯವಾಗಿ ಉಪಯೋಗಿಸಲ್ಪಟ್ಟಿವೆ. ನಂಬಿಕೆ ಮತ್ತು ಅರಿಕೆಮಾಡುವಿಕೆಗಳೆರಡೂ ಒಂದೇ ಉದ್ದೇಶಕ್ಕಾಗಿಯೇ ಆಗಿರುತ್ತವೆ: ರಕ್ಷಣೆ ಹೊಂದುವದಕ್ಕೆ, ನೀತಿವಂತರೆಂದು ನಿರ್ಣಯಿಸಲ್ಪಡುವದಕ್ಕೆ.

9 ಮತ್ತು 10ನೇ ವಚನಗಳು ಬೈಬಲ್ ವಿದ್ಯಾರ್ಥಿಗೆ ವಿಶೇಷ ಆಸಕ್ತಿ ಹೊಂದಿರುತ್ತವೆ ಯಾಕೆಂದರೆ ಅವುಗಳು ನಮ್ಮ ಹೃದಯದಲ್ಲಿರುವ ನಂಬಿಕೆಯನ್ನು ಅರಿಕೆ ಮಾಡುವದರ ಪ್ರಾಮುಖ್ಯತೆಯನ್ನು ತಿಳಿಸುವ ಪ್ರಮುಖವಾದ ವಚನಗಳಾಗಿವೆ. ಯೇಸು ಹೀಗೆ ಹೇಳಿದನು, "ಹಾಗಾದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ, ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು" (ಮತ್ತಾಯ 10:32). ಯೋಹಾನನು ಹೀಗೆ ಬರೆಯುತ್ತಾನೆ, "ಯೇಸು ದೇವರ ಮಗನಾಗಿದ್ದಾನೆಂದು ಯಾವನು ಒಪ್ಪಿಕೊಂಡು ಹೇಳುತ್ತಾನೋ ಅವನಲ್ಲಿ ದೇವರು ನೆಲೆಗೊಂಡಿದ್ದಾನೆ, ಅವನು ದೇವರಲ್ಲಿ ನೆಲೆಗೊಂಡಿದ್ದಾನೆ" (1 ಯೋಹಾನ 4:15; ನೋಡಿರಿ 4:2). KJVಯಲ್ಲಿ, ಐಥಿಯೋಪ್ಯದ ಕಂಚುಕಿಯ ಪರಿವರ್ತನೆಯ ಕಥನದಲ್ಲಿ, ನಾವು ಸುವಾರ್ತಿಕನ ಮತ್ತು ಕಂಚುಕಿಯ ನಡುವೆ ಈ ಸಂಭಾಷಣೆಯನ್ನು ಕಾಣುತ್ತೇವೆ:

> ಅವರು [ಕಂಚುಕಿ ಮತ್ತು ಫಿಲಿಪ್ಪನು] ದಾರಿಯಲ್ಲಿ ಹೋಗುತ್ತಿರುವಾಗ ನೀರಿನ ಬಳಿಗೆ ಬಂದರು. ಕಂಚುಕಿಯು—ಅಗೋ. ನೀರು; ನನಗೆ ದೀಕ್ಷಾಸ್ನಾನವಾಗುವದಕ್ಕೆ ಅಡ್ಡಿ ಏನು ಎಂದು ಹೇಳಿ ರಥವನ್ನು ನಿಲ್ಲಿಸು ಎಂದು ಅಪ್ಪಣೆಕೊಟ್ಟನು; ಫಿಲಿಪ್ಪನು ಕಂಚುಕಿಯು ಇಬ್ಬರೂ ನೀರಿನೊಳಗೆ ಇಳಿದರು. ಫಿಲಿಪ್ಪನು ಅವನಿಗೆ ದೀಕ್ಷಾಸ್ನಾನ ಮಾಡಿಸಿದನು (ಅಪೊಸ್ತಲರ ಕೃತ್ಯಗಳು 8:36-38).

ಅನೇಕ ಪರಿಣತರು ಒಮ್ಮತ ವ್ಯಕ್ತಪಡಿಸುವದೇನೆಂದರೆ, ಕಂಚುಕಿಯ ಉತ್ತಮ ಅರಿಕೆಯನ್ನೊಳಗೊಂಡಿರುವ 37ನೇ ವಚನವು ಮೂಲ ವಾಕ್ಯಭಾಗದ ಅಂಗವಾಗಿರಲಿಲ್ಲ ಎಂಬುದೆ.[13] ಅದೇ ವೇಳೆಯಲ್ಲಿ, ಜನರು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮುನ್ನ ಯೇಸುವಿನಲ್ಲಿ ತಮ್ಮ ನಂಬಿಕೆಯನ್ನು ಅರಿಕೆ ಮಾಡುವ ವಿಧದಲ್ಲಿ ಆದಿ ಸಭೆಯು ಅನುಸರಿಸುತ್ತಿದ್ದ ಆಚರಣೆಯನ್ನು ಈ ವಚನವು ಪ್ರತಿಬಿಂಬಿಸುತ್ತದೆಂಬುದನ್ನು ವೇದಪಂಡಿತರು ಒಪ್ಪಿಕೊಳ್ಳುತ್ತಾರೆ.

ರೋಮಾ 10:9, 10ರಲ್ಲಿ ಪ್ರಸ್ತಾವಿಸಲಾಗಿರುವ ಅರಿಕೆಯು ಖಂಡಿತವಾಗಿಯೂ

ದೀಕ್ಷಾಸ್ನಾನಕ್ಕೆ ಮುಂಚೆ ಮಾಡಲಾಗುತ್ತಿದ್ದ ಅರಿಕೆಯನ್ನೂ ಒಳಗೊಂಡಿರುತ್ತದೆ,[14] ಆದರೆ ಅದು ಅಷ್ಟಕ್ಕೇ ಮಾತ್ರವೇ ಸಿಮೀತಗೊಂಡಿರುವದಿಲ್ಲ. 10ನೇ ವಚನದಲ್ಲಿ, ವರ್ತಮಾನ ಕಾಲ ಉಪಯೋಗಿಸಲ್ಪಟ್ಟಿದೆ, ಅದು ನಿರಂತರವಾದ ಕ್ರಿಯೆಯನ್ನು ಸೂಚಿಸುತ್ತದೆ. CJB ತರ್ಜುಮೆಯಲ್ಲಿ "ವಿಶ್ವಾಸಿಸುತ್ತಾ ಸಾಗುವದರ ಮೂಲಕ ಮತ್ತು . . . ಸಾರ್ವಜನಿಕವಾಗಿ ಒಪ್ಪಿಕೊಂಡು ಅರಿಕೆ ಮಾಡುವದನ್ನು ಮುಂದುವರೆಸುವ ಮೂಲಕ" ಎಂದಿರುತ್ತದೆ. ಬೈಬಲ್ ರಹಸ್ಯ ಶಿಷ್ಯತ್ವವನ್ನು ಪ್ರತಿಪಾದಿಸುವದಿಲ್ಲ. ಆದಿ ಕ್ರೈಸ್ತರು, ಮರಣವು ಮುಂದೆ ಇದ್ದರೂ, ಧೈರ್ಯವಾಗಿ ತಮ್ಮ ನಂಬಿಕೆಯನ್ನು ಘೋಷಿಸಿದರು.

ನಾವು ಯೇಸುವಿನಲ್ಲಿ ನಂಬಿಕೆಯಿಡುವದು ನಿರ್ಣಾಯಕವಾದದ್ದು. ಅಲ್ಲದೆ ಇತರರಿಗೆ ಗೊತ್ತಾಗುವಷ್ಟರ ಮಟ್ಟಿಗೆ ಬಲವಾಗಿ ನಂಬಿಕೆಯಿಡುವದು ಸಹ ನಮಗೆ ಅತ್ಯಾವಶ್ಯಕವಾಗಿರುತ್ತದೆ: ಆತನನ್ನು ಇತರರ ಮುಂದೆ ಅರಿಕೆ ಮಾಡುವದು. ನಂಬಿಕೆ ಮತ್ತು ಅರಿಕೆ ಮಾಡುವಿಕೆ ಎರಡೂ ರಕ್ಷಣೆ ಹೊಂದಿದವರಾಗಿರುವದಕ್ಕೆ ಅತ್ಯಗತ್ಯವಾಗಿರುತ್ತವೆ. ಅರಿಕೆಮಾಡುವಿಕೆ ಇಲ್ಲದ ನಂಬಿಕೆಯು ಹೇಡಿತನವಾಗಿದ್ದರೆ, ನಂಬಿಕೆಯಿಲ್ಲದೆ ಅರಿಕೆಮಾಡುವದು ಕಪಟತನವಾಗಿರುತ್ತದೆ.[15]

"ನಂಬಿಕೆಯಿಂದ ಮಾತ್ರವೇ ರಕ್ಷಣೆ"ಯ ಕೆಲವು ಸಮರ್ಥಕರು ರಕ್ಷಣೆ ಹೊಂದುವದಕ್ಕೆ ಅರಿಕೆಮಾಡುವದು ಅಗತ್ಯವಾಗಿರುತ್ತದೆಂಬ ಪೌಲನ ಉಪದೇಶದಿಂದ ಮುಜುಗರಕ್ಕೊಳಗಾಗುತ್ತಾರೆ. "ನಂಬಿಕೆ ಮಾತ್ರವೇ" ಎಂಬುವವರಿಂದ ಅನೇಕ ಸಾರಿ ಉಪಯೋಗಿ ಸಲ್ಪಡುವ ಅರ್ಥನಿರೂಪಣೆಯೆಂದರೆ "ನಂಬಿಕೆಗೆ ಏನೂ ಕೂಡಿಸಬೇಕಿಲ್ಲ, ನಂಬಿಕೆಗೆ ಏನು ಕಳೆಯಬೇಕಿಲ್ಲ." ಹೇಗೂ, ರೋಮಾ 10:9, 10ರಲ್ಲಿ ನಂಬಿಕೆ ಜೊತೆಗೆ ಅರಿಕೆ ಮಾಡುವಿಕೆ ಇರುತ್ತದೆ. ಕೆಲವು ಅನುವಾದಕರು ಅರಿಕೆ ಮಾಡುವಿಕೆಯನ್ನು ಬೇರೊಂದು ವರ್ಗಕ್ಕೆ ಸೇರ್ಪಡೆಗೊಳಿಸಲು ಪ್ರಯತ್ನಿಸುತ್ತಾರೆ. ಅವರು 10ನೇ ವಚನವನ್ನು ಈ ವಿಧದಲ್ಲಿ ವ್ಯಕ್ತಪಡಿಸುತ್ತಾರೆ: "ಹೃದಯದಿಂದ ಒಬ್ಬ ಮನಷ್ಯನು ನಂಬುತ್ತಾನೆ, ಅದು ಆತನು ನೀತಿವಂತನೆಂದು ನಿರ್ಣಯಿಸಲ್ಪಡುವದರಲ್ಲಿ ಫಲಿತಗೊಳ್ಳುತ್ತದೆ, ಮತ್ತು ಬಾಯಿಂದ, ಆತನು ಅರಿಕೆ ಮಾಡುತ್ತಾನೆ, ಅದು ಆತನ ರಕ್ಷಣೆಯನ್ನು *ದೃಢೀಕರಿಸುತ್ತದೆ*." ಹೇಗೂ, ಗ್ರೀಕ್ ವಾಕ್ಯದಲ್ಲಿ, ನಂಬಿಕೆ ಮತ್ತು ಅರಿಕೆ ಮಾಡುವಿಕೆಯ ಸಂಬಂಧದಲ್ಲಿ ಅದೇ ರೀತಿಯ ಮಾತುಗಳನ್ನು ಉಪಯೋಗಿಸಲಾಗಿರುತ್ತದೆ. "ರಲ್ಲಿ ಫಲಿತಗೊಳ್ಳುತ್ತದೆ" ಎಂಬ ಪದಗುಚ್ಛವು ಗ್ರೀಕ್‌ನ ಉಪಸರ್ಗವಾದ εἰς (*eis*) ಎಂಬುದರ ಒಂದು ಅನುವಾದವಾಗಿರುತ್ತದೆ, ಅದು "ಗಮ್ಯಸ್ಥಾನಗಳ ಗುರುತು" ಆಗಿ ಕಾರ್ಯಮಾಡುತ್ತದೆ ಮತ್ತು ಮೂಲಭೂತವಾಗಿ "ಒಳಕ್ಕೆ"[16] ಎಂಬ ಅರ್ಥವನ್ನು ಕೊಡುತ್ತದೆ. ನಂಬಿಕೆಯು ಒಬ್ಬನನ್ನು ನೀತಿಯ/ರಕ್ಷಣೆಯ "ಒಳಕ್ಕೆ" ಇಡುತ್ತದೆ, ಮತ್ತು ಅರಿಕೆ ಮಾಡುವಿಕೆಯು ಒಬ್ಬನನ್ನು ರಕ್ಷಣೆಯ/ನೀತಿಯ "ಒಳಕ್ಕೆ" ಇಡುತ್ತದೆ. ರಕ್ಷಣೆ/ನೀತಿವಂತರೆಂಬ ನಿರ್ಣಯಕ್ಕೆ ನಂಬಿಕೆ ಮತ್ತು ಅರಿಕೆ ಮಾಡುವಿಕೆ ಎರಡೂ ಅತ್ಯಾವಶ್ಯಕವಾಗಿರುತ್ತವೆ.

ಜನರು ನಂಬಿಕೆಯಿಂದ ಮಾತ್ರವೇ ರಕ್ಷಿಸಲ್ಪಡುತ್ತಾರೆ, ಆದದರಿಂದ, ರಕ್ಷಣೆ ಹೊಂದುವದಕ್ಕೆ ದೀಕ್ಷಾಸ್ನಾನವು ಅತ್ಯಾವಶ್ಯಕವಲ್ಲ ಎಂಬುದನ್ನು ಸಾಭಿತುಪಡಿಸುವದಕ್ಕೆ ಕೆಲವರು ರೋಮಾ 10:9, 10 ವಚನಗನ್ನು ಉಪಯೋಗಿಸುತ್ತಾರೆ. ಇದೊಂದು ರೀತಿಯಲ್ಲಿ ಆಶ್ಚರ್ಯಕರವಾಗಿರುತ್ತದೆ ಯಾಕೆಂದರೆ ರೋಮಾ 10:9, 10 ವಚನಗಳು "faith plus

nothing, minus nothing [ನಂಬಿಕೆಗೆ ಏನೂ ಕೂಡಿಸಬೇಕಿಲ್ಲ, ನಂಬಿಕೆಗೆ ಏನು ಕಳೆಯಬೇಕಿಲ್ಲ]" ಎಂಬುದಾಗಿ ಕಲಿಸುವದಿಲ್ಲ. ಅದು ನಂಬಿಕೆಯ *ಜೊತೆಗೆ* ಅರಿಕೆ ಮಾಡುವಿಕೆ ಎಂದು ಕಲಿಸುತ್ತದೆ. ಇವೆರಡು ಒಂದಕ್ಕೊಂದು ನಿಕಟ ಸಂಬಂಧ ಹೊಂದಿವೆ, ಆದರೆ ಅವುಗಳು ಸಮಾನಾರ್ಥಕವಾಗಿರುವದಿಲ್ಲ. ಒಬ್ಬನು ಅರಿಕೆ ಮಾಡದೆಯೇ ನಂಬುವದಕ್ಕೆ ಸಾಧ್ಯವಿರುತ್ತದೆ (ಯೋಹಾನ 12:42, 43), ಮತ್ತು ಒಬ್ಬನು ನಂಬಿಕೆಯಿಡದೆಯೇ ಅರಿಕೆ ಮಾಡುವದು ಸಾಧ್ಯವಿರುತ್ತದೆ (ಮತ್ತಾಯ 7:21-23; ಲೂಕ 6:46).

ಈ ವಾದವನ್ನು ಮುಂದಿಟ್ಟು ಸವಾಲೊಡ್ಡಿದಾಗ, ರೋಮಾ 10:9, 10 ವಚನಗಳಿಂದ "ನಂಬಿಕೆ ಮಾತ್ರವೇ" ಎಂಬ ನಿಲುವು ಬೆಂಬಲಿಸುವವರು ಸಾಮಾನ್ಯವಾಗಿ "ಅರಿಕೆ ಮಾಡುವಿಕೆಯು ನಂಬಿಕೆಯ *ವ್ಯಕ್ತಪಡಿಸುವಿಕೆ*ಯಾಗಿರುತ್ತದೆ" ಎಂದು ಹೇಳುವ ಮೂಲಕ ಪ್ರತ್ಯುತ್ತರ ನೀಡುತ್ತಾರೆ. ಅದು ಸತ್ಯವಾಗಿದೆ—ಆದರೆ "ನಂಬಿಕೆಯಿಂದ ನೀತಿವಂತರೆಂಬ ನಿರ್ಣಯ"ದ ಸಿದ್ಧಾಂತವು ಅರಿಕೆಯ ವ್ಯಕ್ತಪಡಿಸುವಿಕೆಯನ್ನು ನ್ಯಾಯಸಮ್ಮತವಾಗಿ ಸೇರ್ಪಡೆಗೊಳಿಸಿಕೊಳ್ಳುವದಕ್ಕೆ ಸಾಧ್ಯವಿರುವದಾದರೆ, ಅದು ಪಶ್ಚಾತ್ತಾಪ ಮತ್ತು ದೀಕ್ಷಾಸ್ನಾನಗಳಂತಹ ದೇವರಿಂದ—ನೇಮಿಸಲ್ಪಟ್ಟ ವ್ಯಕ್ತಪಡಿಸುವಿಕೆಗಳನ್ನು ಏಕೆ ಸೇರ್ಪಡೆಗೊಳಿಸಿಕೊಳ್ಳಲು ಸಾಧ್ಯವಿಲ್ಲ (2:4; 6:3-6)? ಪೌಲನು ರೋಮಾ 10ರಲ್ಲಿ ನಂಬಿಕೆ ಮತ್ತು ಅರಿಕೆ ಮಾಡುವಿಕೆಗಳ ಸಂಬಂಧವಾಗಿ ಉಪಯೋಗಿಸಿದ ಅದೇ ಉಪಸರ್ಗವನ್ನು (*eis*) ಪೇತ್ರನು ಅಪೊಸ್ತಲರ ಕೃತ್ಯಗಳು 2ರಲ್ಲಿ, ಪಶ್ಚಾತ್ತಾಪ (ದೇವರ ಕಡೆಗೆ ತಿರುಗಿಕೊಳ್ಳುವಿಕೆ) ಮತ್ತು ದೀಕ್ಷಾಸ್ನಾನದ ಸಂಬಂಧದಲ್ಲಿ ಉಪಯೋಗಿಸುತ್ತಾನೆ. ಪೇತ್ರನು ಪಾಪಿಗಳಿಗೆ ಹೀಗೆ ಆಜ್ಞಾಪಿಸುತ್ತಾನೆ, "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ [*eis*] ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 2:38).

**ವಚನ 11.** ವಾಕ್ಯಭಾಗದೊಂದಿಗೆ ಮುಂದುವರೆಸುತ್ತಾ, ಪೌಲನು ಪುನಃ ಹಳೇ ಒಡಂಬಡಿಕೆಯ ಒಂದು ಸಮರ್ಪಕವಾದ ವಾಕ್ಯಭಾಗವನ್ನು ಉಲ್ಲೇಖಿಸುತ್ತಾನೆ, ಅದು ಸ್ವಲ್ಪ ಹೊತ್ತಿನ ಮುಂಚೆ ಆತನು ಉಪಯೋಗಿಸಿದ್ದ ವಾಕ್ಯಭಾಗವಾಗಿರುತ್ತದೆ (ನೋಡಿರಿ 9:33): **ಆತನ ಮೇಲೆ ನಂಬಿಕೆಯಿಡುವ ಯಾವನಾದರೂ ಆಶಾಭಂಗಪಡುವದಿಲ್ಲವೆಂದು ಶಾಸ್ತ್ರವು ಹೇಳುತ್ತದೆಯಷ್ಟೆ** (ನೋಡಿರಿ ಯೆಶಾಯ 28:16).

**ವಚನ 12.** ಪೌಲನು ತನ್ನ ಮೂಲಭೂತ ಚರ್ಚೆಯಾಂಶವಾದ ನಂಬಿಕೆಯ ಆಧಾರದಲ್ಲಿ ನೀತಿವಂತರೆಂಬ ನಿರ್ಣಯಿಸಲ್ಪಡುವಿಕೆ ಎಂಬುದಕ್ಕೆ ಹಿಂದಿರುಗಿದವನಾಗಿ, **ಈ ವಿಷಯದಲ್ಲಿ ಯೆಹೂದ್ಯನಿಗೂ ಗ್ರೀಕ್‌ನಿಗೂ ಹೆಚ್ಚುಕಡಿಮೆ ಏನೂ ಇಲ್ಲ** ಎಂದು ಗಮನಕ್ಕೆ ತರುತ್ತಾನೆ. 3:22ರಲ್ಲಿ, ಆತನು ಯೆಹೂದ್ಯರಿಗೂ ಅನ್ಯಜನರಿಗೂ "ಹೆಚ್ಚುಕಡಿಮೆ ಏನೂ ಇಲ್ಲ" ಎಂದು ಹೇಳಿದ್ದನು; ಆದರೆ ಆ ವಾಕ್ಯಭಾಗದಲ್ಲಿ ಆತನು ರಕ್ಷಣೆಯ ಅಗತ್ಯತೆಯ ವಿಷಯವಾಗಿ ಹೆಚ್ಚುಕಡಿಮೆ ಏನೂ ಇಲ್ಲ ಎಂಬುದನ್ನು ತೋರಿಸಿ ಕೊಡುವವನಾಗಿದ್ದನು, "ಎಲ್ಲರೂ [ಯೆಹೂದ್ಯರು ಮತ್ತು ಅನ್ಯಜನರು ಇಬ್ಬರೂ] ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" (3:23). 10:12ರಲ್ಲಿ, ಅಪೊಸ್ತಲನು ರಕ್ಷಣೆಯ *ಆಧಾರದ* ವಿಷಯದಲ್ಲಿ ಹೆಚ್ಚುಕಡಿಮೆ ಏನೂ ಇಲ್ಲ ಎಂಬುದನ್ನು ಒತ್ತಿ ಹೇಳುತ್ತಿದ್ದಾನೆ: ಯೆಹೂದ್ಯರು

ಮತ್ತು ಅನ್ಯಜನರು ಇಬ್ಬರೂ ನಂಬಿಕೆಯ ಆಧಾರದಲ್ಲಿಯೇ ರಕ್ಷಿಸಲ್ಪಡುವರು. F. F. Bruce ಹೀಗೆ ಅಭಿಪ್ರಾಯ ಪಡುತ್ತಾನೆ,

> ರೋಮಾಪುರದವರಿಗೆ ಪತ್ರಿಕೆಯ (3:22) ವಾದದ ಒಂದು ಪ್ರಾರಂಭದ ಹಂತದಲ್ಲಿ 'ಹೆಚ್ಚುಕಡಿಮೆ ಏನೂ ಇಲ್ಲ' ಎಂಬ ಮಾತುಗಳು ಕರಾಳವೆಂಬಂತೆ ಭಾಸವಾಗುತ್ತವೆ, ಯಾಕೆಂದರೆ ಅವುಗಳು ಯೆಹೂದ್ಯರು ಮತ್ತು ಅನ್ಯಜನರಿಗೆ ಒಟ್ಟಾಗಿ ದೇವರ ವಿರುದ್ಧ ಅವರು ಮಾಡಿದ ಪಾಪದ ಕುರಿತು ಮತ್ತು ವೈಯಕ್ತಿಕ ಪ್ರಯತ್ನಗಳಿಂದ ಆತನ ಅಂಗೀಕಾರವನ್ನು ಗಳಿಸಿಕೊಳ್ಳುವ ಅವರ ಸಮರ್ಥತೆಯ ಕುರಿತು ಅರುಹು ಹುಟ್ಟಿಸಿದ್ದವು . . . ; ಈಗ ಅದೇ ಮಾತುಗಳು ಸಂತೋಷಭರಿತವಾಗಿ ಭಾಸವಾಗುತ್ತವೆ, ಯಾಕೆಂದರೆ ದೇವರ ಕೃಪೆಯ ದ್ವಾರವು ವಿಶಾಲವಾಗಿ ಅವರ ಪ್ರವೇಶಕ್ಕೆ ತೆರೆದು ನಿಂತಿದೆ ಎಂದೂ, ನಂಬಿಕೆಯಿಂದ ತಮ್ಮದಾಗಿಸಿಕೊಳ್ಳುವ ಎಲ್ಲರಿಗೂ ಕ್ರಿಸ್ತನಲ್ಲಿ ಆತನ ಉಚಿತ ಕ್ಷಮಾಪಣೆಯು ಸಿಕ್ಕುತ್ತದೆಂಬ ಭರವಸೆಯನ್ನೂ ಒಟ್ಟಾಗಿ ಯೆಹೂದ್ಯರಿಗೆ ಮತ್ತು ಅನ್ಯಜನರಿಗೆ ಘೋಷಿಸುತ್ತವೆ.[17]

ಪೌಲನು ಮುಂದುವರೆದು ಹೇಳುತ್ತಾನೆ, **ಎಲ್ಲರಿಗೂ** [ಯೆಹೂದ್ಯರಾಗಲಿ ಅಥವಾ ಅನ್ಯಜನರಾಗಲಿ; ನೋಡಿರಿ 3:29, 30] **ಒಬ್ಬನೇ ಕರ್ತ; ಆತನು ತನ್ನ ನಾಮವನ್ನು ಹೇಳಿಕೊಳ್ಳುವವರಿಗೆ** [ಯೆಹೂದ್ಯರಾಗಲಿ ಅಥವಾ ಅನ್ಯಜನರಾಗಲಿ] **ಹೇರಳವಾಗಿ ಕೊಡುವವನಾಗಿದ್ದಾನೆ.** ನಾವು ಲೋಕದಲ್ಲಿಯೇ ಅತ್ಯಂತ ಶ್ರೀಮಂತ ಜನರನ್ನು ಕುರಿತು ಆಲೋಚಿಸೋಣ. ಅವರು ಎಷ್ಟೇ ಐಶ್ವರ್ಯವಂತರಾಗಿದ್ದಾಗ್ಯೂ, ಅವರ ಐಶ್ವರ್ಯಕ್ಕೆ ಒಂದು ಮಿತಿಯಿರುತ್ತದೆ—ಆದರೆ ದೇವರ ಐಶ್ವರ್ಯದ ವಿಷಯದಲ್ಲಿ ಮಿತಿ ಎಂಬುದಿಲ್ಲ. JB ತರ್ಜುಮೆಯು ಹೀಗೆ ಹೇಳುತ್ತದೆ, "ಕರ್ತನು . . . ಸಾಕಷ್ಟು ಐಶ್ವರ್ಯವಂತನು, ಹೇಗಿದ್ದರೂ ಅನೇಕರು ಆತನ ಸಹಾಯವನ್ನು ಕೇಳುವರು."

**ವಚನ 13. ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದೆಂದು ಬರೆದದೆ.** ಆತನ ನಾಮವನ್ನು "ಹೇಳಿಕೊಳ್ಳುವವರೆಲ್ಲರಿಗೆ" ಎಂದರೆ ಸಹಾಯವನ್ನು ಖಾತರಿಪಡಿಸಿಕೊಳ್ಳಲು "ನಾಮವನ್ನು" ಮೊರೆಯಿಸುವದು ಎಂಬದನ್ನು ಸೂಚಿಸುತ್ತದೆ. ಅದು ಯಾವುದೋ "ಮಾಂತ್ರಿಕವಾದ ಮಂತ್ರ"ದ ಪಠಣೆಯಂತಲ್ಲ, ಆದರೆ ಬದಲಾಗಿ "ಅದು ಅಸಮರ್ಥತೆ ಮತ್ತು ಅಗತ್ಯದ ಭಾವನೆಯಿಂದ ಕರ್ತನನನ್ನು ಮೊರೆಯಿಡುವದಾಗಿರುತ್ತದೆ ಮತ್ತು ಅದು ಕರ್ತನು ಅವಲಂಭಿಸುವದಕ್ಕೆ ಯೋಗ್ಯನಾಗಿರಬಲ್ಲನು ಎಂಬ ಒಂದು ನೈಜವಾದ ಮನವರಿಕೆಯಿಂದ ಬರುವಂಥದ್ದು."[18] Jim McGuigganನು ಕರ್ತನನ್ನು ಮೊರೆಯಿಡುವ ವಿಷಯವಾಗಿ ಅದು "ಅವಶ್ಯವಾಗಿರುವ ಒಬ್ಬನ ಕೂಗುವಿಕೆ" ಹಾಗಿರುತ್ತದೆಂದು ಕರೆಯುತ್ತಾನೆ.[19]

13ನೇ ವಚನದಲ್ಲಿನ ಉಲ್ಲೇಖನವು ಯೋವೇಲ 2:32ರಿಂದ ತೆಗೆದುಕೊಳ್ಳಲ್ಪಟ್ಟಿದೆ: "ಆದರೂ ಯೆಹೋವನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದು." ಯೋವೇಲ ಪುಸ್ತಕದಲ್ಲಿರುವ ವಾಕ್ಯಭಾಗವು "ಯೆಹೋವನ ಆಗಮನದ ಭಯಂಕರವಾದ ಮಹಾದಿನವು" ಬರುವದರ ವಿಷಯವಾಗಿರುತ್ತದೆ (ಯೋವೇ 2:30), ಮತ್ತು ಯೆಹೋವನು ಎಂಬ ಪದವು ದೇವರನ್ನು ಸೂಚಿಸುವದಾಗಿದೆ. Douglas J. Moo ಈ ತಾರ್ಕಿಕವಾದ ನಿಗಮನಾತ್ಮಕತೆಯನ್ನು ನೀಡುತ್ತಾನೆ: "ಯೋವೇಲ ಪುಸ್ತಕದಲ್ಲಿರುವ 'ಕರ್ತನು'

ಯೆಹೋವನು, ಅದು ದೇವರ ಒಡಂಬಡಿಕೆಯ ಹೆಸರು. ಆದರೆ ಪೌಲನು ಈ 'ಕರ್ತನು" ಎಂಬುದನ್ನು ಯೇಸುವಿನೊಂದಿಗೆ ಗುರುತಿಸುತ್ತಾನೆ (ನೋಡಿರಿ 10:9, 12) . . . ಹಾಗಾದರೆ, 13ನೇ ವಚನವು, ಆದಿ ಕ್ರೈಸ್ತರು ಯೇಸುವನ್ನು ದೇವರೊಂದಿಗೆ ಗುರುತಿಸಿದರೆಂಬುದಕ್ಕೆ ಒಂದು ಪ್ರಾಮುಖ್ಯವಾದ ಪುರಾವೆಯಾಗಿರುತ್ತದೆ."[20]

ರೋಮಾ 10:12, 13 ವಚನಗಳನ್ನು ಕೆಲವರು ಸಾಮಾನ್ಯವಾಗಿ ಮತ್ತು ನಿರ್ದಿಷ್ಟವಾಗಿ ದೀಕ್ಷಾಸ್ನಾನದಲ್ಲಿ ವಿಧೇಯತೆಯ ಅವಶ್ಯಕತೆಯನ್ನು ಅಲ್ಲಗಳೆಯುವದಕ್ಕೆ ಉಪಯೋಗಿಸುತ್ತಾರೆ. ಒಬ್ಬನು "ಕರ್ತನ ನಾಮವನ್ನು ಹೇಳಿಕೊಳ್ಳುವದಷ್ಟನ್ನೇ" ಮಾಡಿದರೆ ಸಾಕು ಎಂದು ಅವರು ಹೇಳುತ್ತಾರೆ, "ಪಾಪಿಯು ಮಾಡಬೇಕಾದ ಪ್ರಾರ್ಥನೆ" ಯನ್ನು ಪಠಿಸುವದರ ಮೂಲ ಒಬ್ಬನು "ಕರ್ತನ ನಾಮವನ್ನು ಹೇಳಿಕೊಳ್ಳಬೇಕು" ಎಂದು ಅವರು ವಾದಿಸುತ್ತಾರೆ. ಹೇಗೂ, ಸನ್ನಿವೇಶದ ಪ್ರಕಾರ ನೋಡುವದಾದರೆ, 12 ಮತ್ತು 13 ವಚನಗಳಲ್ಲಿನ ಕರ್ತನ ನಾಮವನ್ನು ಹೇಳಿಕೊಳ್ಳುವದು ಹಾಗೂ 10 ಮತ್ತು 11 ವಚನಗಳಲ್ಲಿನ ನಂಬುವದು ಮತ್ತು ಅರಿಕೆ ಮಾಡುವದು ಒಂದೇ ಆಗಿರುತ್ತದೆ. ಅಷ್ಟುಮಾತ್ರವಲ್ಲದೆ, ಪೇತ್ರನು ಅಪೊಸ್ತಲರ ಕೃತ್ಯಗಳು 2:21ರಲ್ಲಿ ಯೋವೇಲ ಪುಸ್ತಕದಿಂದ ಅದೇ ವಾಕ್ಯಭಾಗವನ್ನು ಉಲ್ಲೇಖಿಸಿದನು, ಮತ್ತು ನಂತರ ತನ್ನ ಶ್ರೋತೃಗಳಿಗೆ ಪಶ್ಚಾತಾಪ ಪಟ್ಟು (ದೇವರ ಕಡೆಗೆ ತಿರುಗಿಕೊಂಡು) ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಹೇಳಿದನು (ಅಪೊಸ್ತಲರ ಕೃತ್ಯಗಳೂ 2:38). ಅದು ಮಾತ್ರವಲ್ಲದೆ, ದೀಕ್ಷಾಸ್ನಾನವು "[ಕರ್ತನ] ನಾಮವನ್ನು ಹೇಳಿಕೊಳ್ಳುವದರಲ್ಲಿ" ಸೇರ್ಪಡೆಗೊಂಡಿರುವ ಒಂದು ಪ್ರೇರಿತ ಉದಾಹರಣೆಯು ನಮಗಿರುತ್ತದೆ. ಬೋಧಕನಾದ ಅನನೀಯನು ಸೌಲನಿಗೆ, "ಈಗ ನೀನೇಕೆ ಸಾವಕಾಶ ಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು" (ಅಪೊಸ್ತಲರ ಕೃತ್ಯಗಳು 22:16). ಅಂತಿಮವಾಗಿ, 10ನೇ ವಚನದಲ್ಲಿನ ನಂಬಿಕೆಯಿಡುವದು ಮತ್ತು ಅರಿಕೆ ಮಾಡುವದರ ಹಾಗೆಯೇ, ಸಹಾಯಕ್ಕಾಗಿ ಕರ್ತನ ನಾಮಕ್ಕೆ ಮೊರೆಯಿಡುವದು ಒಬ್ಬ ನಂಬಿಗಸ್ತನಾದ ಕ್ರೈಸ್ತನು ತನ್ನ ಜೀವಿತಕಾಲವೆಲ್ಲಾ ಮಾಡುವಂತಹ ಒಂದು ಸಂಗತಿಯಾಗಿರುತ್ತದೆ (ನೋಡಿರಿ 1 ಕೊರಿಂಥ 1:2; 2 ತಿಮೊಥೆ 2:22).

ಪೌಲನು ಉಪದೇಶಿಸುತ್ತಿದ್ದ ಸತ್ಯದ ಕಡೆಯಿಂದ ನಮ್ಮ ಗಮನವನ್ನು ಬೇರೆ ಕಡೆಗೆ ಸೆಳೆಯದಂತೆ ನಾವು 10:9-13ರ ಮೇಲಿನ ವಿವಾದಕ್ಕೆ ಅವಕಾಶವನ್ನು ಕೊಡಬಾರದು. ದೇವರು ರಕ್ಷಣೆಯ ಎರಡು ಮಾರ್ಗಗಳನ್ನು ಹೊಂದಿರುವದಿಲ್ಲ ಎಂಬುದನ್ನು ಆತನು ಒತ್ತಿ ಹೇಳುತ್ತಿದ್ದಾನೆ: ಯೆಹೂದ್ಯರಿಗೋಸ್ಕರ ಒಂದು ಮಾರ್ಗ ಮತ್ತು ಅನ್ಯಜನರಿಗೋಸ್ಕರ ಒಂದು ಮಾರ್ಗ. ಬದಲಾಗಿ, ಯೆಹೂದ್ಯರು ಹಾಗೂ ಅನ್ಯಜನರು ಒಂದೇ ಮಾರ್ಗದಲ್ಲಿ ರಕ್ಷಣೆ ಹೊಂದುವರು: ಯೇಸುವಿನಲ್ಲಿ ನಂಬಿಕೆಯಿಟ್ಟು ಅವರ ನಂಬಿಕೆಯನ್ನು ವ್ಯಕ್ತಪಡಿಸುವ ಮೂಲಕ. ಯೆಹೂದ್ಯರು ರಕ್ಷಣೆ ಹೊಂದಿಲ್ಲದವರಾಗಿದ್ದರೆ, ಅದಕ್ಕೆ ತಾವೇ ಹೊಣೆಯೇ ಹೊರತು ಬೇರೆ ಯಾರೂ ಅಲ್ಲ. ಅವರು ಯೇಸುವನ್ನು ಮೆಸ್ಸೀಯನೆಂದು ಮತ್ತು ರಕ್ಷಕನೆಂದು ಅಂಗೀಕರಿಸಿಕೊಳ್ಳಲು ನಿರಾಕರಿಸಿದ್ದೇ ಕಾರಣವಾಗಿರುವದು.

## ನಂಬಿಕೆಯನ್ನು ಉಂಟುಮಾಡುವದಕ್ಕೆ ಸಾರುವದರ ಅಗತ್ಯತೆ (10:14-17)

**[14]ಆದರೆ ತಾವು ಯಾವನನ್ನು ನಂಬಲಿಲ್ಲವೋ ಆತನ ನಾಮವನ್ನು ಹೇಳಿಕೊಳ್ಳುವದು ಹೇಗೆ? ಮತ್ತು ಆತನ ಸುದ್ದಿ ಕೇಳದಿರುವಲ್ಲಿ ಆತನನ್ನು ನಂಬುವದು ಹೇಗೆ? ಸಾರಿ ಹೇಳಿವವನಿಲ್ಲದೆ ಕೇಳುವದು ಹೇಗೆ? ಸಾರುವವರು ಕಳುಹಿಸಲ್ಪಡದೆ ಸಾರುವದೆಲ್ಲಿ? [15]ಇದಕ್ಕೆ ಸರಿಯಾಗಿ ಶುಭದ ಸುವಾರ್ತೆಯನ್ನು ಸಾರುವವರ ಪಾದಗಳು ಎಷ್ಟೋ ಅಂದವಾಗಿವೆ ಎಂದು ಬರೆದದೆ.**

**ಆದರೂ ಆ ಶುಭವರ್ತಮಾನಕ್ಕೆ ಎಲ್ಲರೂ ಕಿವಿಗೊಡಲಿಲ್ಲ. [16]ಈ ವಿಷಯದಲ್ಲಿ ಯೆಶಾಯನು – ಕರ್ತನೇ, ನಾವು ಸಾರಿದ ವಾರ್ತೆಯನ್ನು ಯಾರು ನಂಬಿದರು ಎಂದು ನುಡಿಯುತ್ತಾನೆ. [17]ಆದಕಾರಣ ಸಾರಿದ ವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ.**

ರೋಮಾಪುರದವರಿಗೆ ಪತ್ರಿಕೆಯುದ್ದಕ್ಕೂ ಪೌಲನು ನೀತಿವಂತರೆಂಬ ನಿರ್ಣಯವು ನಂಬಿಕೆಯ ಆಧಾರದಲ್ಲಿಯೇ ಎಂಬದನ್ನು ಒತ್ತಿ ಹೇಳಿದನು—ಆದರೆ ಯಾವ ಘಟನಾವಳಿಗಳು ನಂಬಿಕೆಯನ್ನು ತರುತ್ತವೆ? ರೋಮಾ 10ರ ಕಡೇ ಭಾಗದಲ್ಲಿ, ಜನರ ಹೃದಯಗಳಲ್ಲಿ ನಂಬಿಕೆಯನ್ನು ಹುಟ್ಟಿಸುವದಕ್ಕೆ ದೇವರು ಹೊಂದಿರುವ ಯೋಜನೆಯನ್ನು ಅಪೊಸ್ತಲನು ಸಂಕ್ಷೇಪ್ತವಾಗಿ ವಿವರಿಸುತ್ತಾನೆ. ಅದು ದೇವರ ಯೋಜನೆ ಆಗಿರುವದರಿಂದ, ಅದು ಅವಶ್ಯಕವಾಗಿ, ಒಂದು ಪರಿಪೂರ್ಣವಾದ ಯೋಜನೆಯೇ ಆಗಿರುತ್ತದೆ. ಅದು ಒಂದು ಪ್ರಶ್ನೆಯನ್ನು ಎಬ್ಬಿಸುತ್ತದೆ: ಯೋಜನೆಯು ಪರಿಪೂರ್ಣವಾಗಿದ್ದರೆ, ಏಕೆ ಪ್ರತಿಯೊಬ್ಬರೂ ನಂಬಿಕೆಯಿಡುತ್ತಿಲ್ಲ? ಅದಕ್ಕೆ ಉತ್ತರವೆಂದರೆ ಯೋಜನೆಯು ಒಂದು ಮಾನವ ಅಂಶವನ್ನು ಒಳಗೊಂಡಿರುತ್ತದೆ. ದೇವರ ಯೋಜನೆ ಪರಿಪೂರ್ಣವಾದದ್ದು, ಆದರೆ ಅದನ್ನು ಅಂಗೀಕರಿಸಿಕೊಳ್ಳುವಂತೆ ಆತನು ಯಾರೊಬ್ಬರನ್ನೂ ಒತ್ತಾಯಪಡಿಸುವದಿಲ್ಲ. ಜನರು ಅದನ್ನು ತಿರಸ್ಕರಿಸಬಲ್ಲರು ಮತ್ತು ತಿರಸ್ಕರಿಸುತ್ತಾರೆ.

10:14-17ರಲ್ಲಿ, ಮಾನವರನ್ನು ರಕ್ಷಿಸುವದಕ್ಕೆ ದೇವರು ಮಾಡಿರುವ ಆಶ್ಚರ್ಯಕರವಾದ ಯೋಜನೆಯ ಮೂಲಭೂತ ಅಂಶಗಳನ್ನು ಕಾಣುತ್ತೇವೆ. ಯೋಜನೆಯಲ್ಲಿ ಏನು ಅಗತ್ಯವಾಗಿರುತ್ತದೆಂಬುದನ್ನು ನೋಡೋಣ.

**ವಚನಗಳು 14, 15.** ನಾವು ಮೂಲಭೂತವಾಗಿ ಈ ವಚನಗಳನ್ನು ನಮ್ಮ ಸಂಕ್ಷೇಪ್ತ ವಿವರಣೆಗಳಾಗಿ ಉಪಯೋಗಿಸುವೆವು, ಆದರೆ ಅಗತ್ಯತೆಗಳನ್ನು ಕಾಲಗಣನಶಾಸ್ತ್ರಕ್ಕನುಸಾರದ ಕ್ರಮದಲ್ಲಿಡುವದಕ್ಕಾಗಿ ವಾಕ್ಯಭಾಗದಲ್ಲಿರುವ ಹಿಮ್ಮುಖವಾಗಿ ವ್ಯವಸ್ಥೆ ಮಾಡಲಿದ್ದೇವೆ. ಪ್ರತಿ ಪ್ರಶ್ನೆಗೆ ಉತ್ತರವೆಂದರೆ "ಅವರಿಗೆ ಸಾಧ್ಯವಿಲ್ಲ" ಎಂಬುದೆ.

1. *ದೇವರ ಯೋಜನೆಯು ಒಂದು ದೈವಿಕ ಆದೇಶದೊಂದಿಗೆ ಆರಂಭಗೊಳ್ಳುತ್ತದೆ.* ವಚನ 15a ರಲ್ಲಿ ನಾವು ಹೀಗೆ ಓದುತ್ತೇವೆ, **ಸಾರುವವರು *ಕಳುಹಿಸಲ್ಪಡದೆ* ಸಾರುವದೆಲ್ಲಿ?** (ಒತ್ತಿ ಹೇಳಿದ್ದು ನನ್ನದು). ನಾವು ಅನೇಕ ಸಾರಿ ಈ ವಚನವನ್ನು ಮಿಶನರಿ

ಸೇವಾಕಾರ್ಯಗಳ ಸಂಬಂಧವಾಗಿ ಉಪಯೋಗಿಸುತ್ತೇವೆ: “ಅವರು [ನಮ್ಮಿಂದ] ಕಳುಹಿಸಲ್ಪಡದೆ [ಒಂದು ನಿರ್ದಿಷ್ಟ ದೇಶದಲ್ಲಿ] ಹೇಗೆ ಸಾರುವರು?” ಇದೊಂದು ನ್ಯಾಯಸಮ್ಮತವಾದ ಮತ್ತು ಪ್ರಾಮುಖ್ಯವಾದ ಪ್ರಶ್ನೆಯಾಗಿರುತ್ತದೆ, ಆದರೆ ಪೌಲನು ಕೇಳಿದ ಪ್ರಶ್ನೆಯ ಪ್ರಾಥಮಿಕ ಒತ್ತು ಅದಾಗಿರುವದಿಲ್ಲ. ಆತನು ಇಲ್ಲಿ ಯೆಹೂದ್ಯರು ಉತ್ತರವಿಲ್ಲದವರಾಗಿದ್ದಾರೆ ಯಾಕೆಂದರೆ *ದೇವರು* ಅವರ ರಕ್ಷಣೆಗೆ ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದನು ಎಂಬುದನ್ನು ಒತ್ತಿ ಹೇಳುತ್ತಿದ್ದಾನೆ. ಸನ್ನಿವೇಶದಲ್ಲಿ, ಪ್ರಶ್ನೆಯ ತಾತ್ಪರ್ಯವು ಏನಾಗಿತ್ತೆಂದರೆ, ಅವರು ದೇವರಿಂದ ಕಳುಹಿಸಲ್ಪಟ್ಟಿರದೆ—ಅವರಿಗೆ ದೈವಿಕ ಆದೇಶವಿರುವ ಹೊರತು—ಹೇಗೆ ಸಾರುವರು? ಎಂಬದೆ.

“ಕಳುಹಿಸಲ್ಪಡದೆ” ಎಂಬ ಪದವು ἀποστέλλω (*apostellō*) ಎಂಬದರಿಂದ ಬಂದಿರುತ್ತದೆ, ಅದರರ್ಥವು “ಕಳುಹಿಸಿ ಕೊಡುವದು.”[21] *Apostellō* ಎಂಬುದು “ಅಪೊಸ್ತಲ” (ἀπόστολος, *apostolos*) ಎಂಬುದರ ಕ್ರಿಯಾಪದದ ರೂಪವಾಗಿದೆ, ಅದರರ್ಥವು “ಕಳುಹಿಸಲ್ಪಟ್ಟವನು.” ಪೌಲನು ಹಾಗೂ ಇತರ ಅಪೊಸ್ತಲರು ಹೋಗಿ ಸುವಾರ್ತೆಯನ್ನು ಸಾರುವದಕ್ಕಾಗಿ ಕರ್ತನಿಂದ ಒಂದು *ವಿಶೇಷವಾದ* ಆದೇಶವನ್ನು ಪಡೆದಿದ್ದರು, ಆದರೆ *apostellō* ಆ ಕೆಲವೇ ಕೆಲವು ವ್ಯಕ್ತಿಗಳಿಗೆ ಮಾತ್ರ ಸೀಮಿತವಾಗಿರುವದಿಲ್ಲ. ನಮಗೆ ಸಹ ಹೋಗಿ ಉಪದೇಶ ಮಾಡಬೇಕೆಂಬ ಮತ್ತು ಸಾರಬೇಕೆಂಬ ಒಂದು ದೈವಿಕ ಆದೇಶವಿರುತ್ತದೆ. ಅದು ಒಂದು ದರ್ಶನದ ಮೂಲಕ ಅಥವಾ “ಒಂದು ಮೆಲ್ಲನೆಯ ಚಿಕ್ಕ ಸ್ವರದ” ಮೂಲಕ ಬರುವದಿಲ್ಲ (1 ಅರಸು 19:12; KJV); ಬದಲಾಗಿ, ಅದು ನಮಗೆ ಲಿಖಿತರೂಪದಲ್ಲಿರುತ್ತದೆ:

> ಆಗ ಯೇಸು ಹತ್ತರಕ್ಕೆ ಬಂದು—ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯ ವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು (ಮತ್ತಾಯ 28:18-20).

ನಾವು ಕಳೆದು ಹೋದವರೊಂದಿಗೆ ಸುವಾರ್ತೆಯನ್ನು ಸಾರುವಾಗ, ನಾವು ಆ ಕಾರ್ಯವನ್ನು ಸ್ವತಃ ಕರ್ತನ ಬೆಂಬಲ ಹಾಗೂ ಅಧಿಕಾರದಿಂದ ಮಾಡುತ್ತೇವೆ.

2. *ದೇವರ ಯೋಜನೆಯ ಮುಂದಿನ ಅಂಶವೆಂದರೆ ಸುವಾರ್ತೆಯನ್ನು ಸಾರುವದು. ನಮ್ಮ ವಾಕ್ಯಭಾಗದಲ್ಲಿ ಹಿಂದಕ್ಕೆ ಸಾಗಿ, ವಚನ* 14cಯಲ್ಲಿ ನಾವು ಹೀಗೆ ಓದುತ್ತೇವೆ, ***ಸಾರಿ ಹೇಳುವವನಿಲ್ಲದೆ ಕೇಳುವದು ಹೇಗೆ?*** (ಒತ್ತಿ ಹೇಳಿದ್ದು ನನ್ನದು). ಸಾರುವದರ ಮಹತ್ವವನ್ನು ತಿಳಿಸುವ ಹೊಸ ಒಡಂಬಡಿಕೆಯ ವಾಕ್ಯಭಾಗಗಳಲ್ಲೊಂದಾಗಿದೆ (ನೋಡಿರಿ 1 ಕೊರಿಂಥ 1:21; KJV). ಪೌಲನು ತಿಮೊಥೆಯನಿಗೆ ಹೀಗೆ ಹೇಳಿದನು,

> ದೇವರ ಮುಂದೆ ಮತ್ತು ಜೀವಿಸುವವರಿಗೂ ಸತ್ತವರಿಗೂ ನ್ಯಾಯತೀರಿಸುವದಕ್ಕೆ ಬರುವ ಕ್ರಿಸ್ತ ಯೇಸುವಿನ ಮುಂದೆ ಆತನ ಪ್ರತ್ಯಕ್ಷತೆಯ ಮೇಲೆಯೂ ಆತನ ರಾಜ್ಯದ ಮೇಲೆಯೂ ಆಣೆಯಿಟ್ಟು ನಾನು ನಿನಗೆ ಖಂಡಿತವಾಗಿ ಹೇಳುವದೇನಂದರೆ—*ದೇವರ ವಾಕ್ಯವನ್ನು ಸಾರು*, ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ

ಅದರಲ್ಲಿ ಆಸಕ್ತನಾಗಿರು; ಪೂರ್ಣ ದೀರ್ಘಶಾಂತಿಯಿಂದ ಉಪದೇಶಿಸುತ್ತಾ ಖಂಡಿಸು, ಗದರಿಸು, ಎಚ್ಚರಿಸು (2 ತಿಮೊಥೆ 4:1, 2; ಒತ್ತಿ ಹೇಳಿದ್ದು ನನ್ನದು).

ಹೇಗೂ, ನಾವು ಅರ್ಥಮಾಡಿಕೊಳ್ಳತಕ್ಕದ್ದೇನೆಂದರೆ, ರೋಮಾ 10:14ರಲ್ಲಿ "ಸಾರಿ ಹೇಳುವವನು" ಎಂಬುದರ ಅನುವಾದಿತ ಗ್ರೀಕ್ ಪದವು ಭಾನುವಾರದಂದು ಪ್ರಸಂಗ ಪೀಠದಲ್ಲಿ ನಿಂತುಕೊಳ್ಳುವ ಅಥವಾ ಇತರ ಸಂದರ್ಭಗಳಲ್ಲಿ ನಿಂತುಕೊಳ್ಳುವ ವ್ಯಕ್ತಿಗೆ ಸಿಮೀತವಾಗಿರುವದಿಲ್ಲ. κηρύσσω (*kērussō*) ಎಂಬ ಪದದ ಅರ್ಥವು "ಒಬ್ಬ ಘೋಷಕನಾಗಿರುವದು."[22] "ಘೋಷಕ" ಎಂಬುದರ ಮೂಲಭೂತ ಅರ್ಥವು "ಕಳುಹಿಸಲ್ಪಡುವ"ದಕ್ಕೆ ನಿಕಟ ಸಂಬಂಧ ಹೊಂದಿರುತ್ತದೆ. ಪ್ರಥಮ ಶತಮಾನದ ಘೋಷಕನಿಗೆ ಅಧಿಕಾರದಲ್ಲಿರುವವನೊಬ್ಬನು ಒಂದು ಸಂದೇಶವನ್ನು ಕೊಟ್ಟು, ಆ ಸಂದೇಶವನ್ನು ತಿಳಿಯಪಡಿಸುವಂತೆ ಘೋಷಕನನ್ನು ಕಳುಹಿಸಿ ಕೊಡುತ್ತಿದ್ದನು. ಘೋಷಕನು ಗ್ರಾಮ ಪ್ರದೇಶದಲ್ಲಿ ಪ್ರಯಾಣಿಸುತ್ತಿದ್ದನು, ಆತನು ದಾರಿಯಲ್ಲಿ ಸಿಕ್ಕುವ ಯಾವದೇ ವ್ಯಕ್ತಿಗೆ—ಗ್ರಾಮದ ಅಡ್ಡದಾರಿಗಳಲ್ಲಿ ಸಿಕ್ಕುವ ಬೆರಳೆಣಿಕೆಯಷ್ಟು ಜನರಿರಲಿ ಅಥವಾ ನಗರದ ಗಲಾಟೆಯಿಂದ ಕೂಡಿರುತ್ತಿದ್ದ ಸಂತೆಯಲ್ಲಿನ ಜನಜಂಗುಳಿಯಿರಲಿ—ಸಂದೇಶವನ್ನು ಸಾರುತ್ತಿದ್ದನು. ಕರ್ತನ ಮಹಾ ಆದೇಶವು, ತತ್ಪರಿಣಾಮವಾಗಿ, ಪ್ರತಿಯೊಬ್ಬ ಕ್ರೈಸ್ತನನ್ನು ಒಬ್ಬ ಘೋಷಕನನ್ನಾಗಿ ಕಳುಹಿಸಿ ಕೊಟ್ಟಿರುತ್ತದೆ. ಕೆಲವರು ಸಂದೇಶವನ್ನು ಸಾರ್ವಜನಿಕವಾಗಿ ಸಾರುವರು ಮತ್ತು ಇತರ ಕೆಲವರು ವೈಯಕ್ತಿಕವಾಗಿ ಸಾರುವರು, ಆದರೆ ನಮ್ಮಲ್ಲಿ ಪ್ರತಿಯೊಬ್ಬರು ಸಹ ಅದನ್ನು ಸಾರುವವರಾಗಿರತಕ್ಕದ್ದು.

ಹೇಗೂ, ನಾವು ಅರ್ಥಮಾಡಿಕೊಳ್ಳತಕ್ಕದ್ದೇನೆಂದರೆ, ಶಕ್ತಿಯು ಘೋಷಕನಲ್ಲಿ ಇಲ್ಲ ಎಂಬುದೇ; ಅದು ಘೋಷಕನ ಸಂದೇಶದಲ್ಲಿರುತ್ತದೆ. ದೇವರ ಯೋಜನೆಯ ವಿಷಯದಲ್ಲಿ ನೋಡುವದಾದರೆ, ಆ ಸಂದೇಶವು ಯಾವುದು? 14ನೇ ವಚನವು ಹೇಳುವದಿಲ್ಲ, ಆದರೆ ನಂತರದ ವಚನಗಳು ಅದನ್ನು ತಿಳಿಸುತ್ತವೆ. NASB ಯಲ್ಲಿ, 15 ಮತ್ತು 16ನೇ ವಚನಗಳು "ಶುಭವಾರ್ತೆ" ಎಂಬ ಪದಗುಚ್ಛವನ್ನು ಉಪಯೋಗಿಸುತ್ತವೆ. ಗ್ರೀಕ್‌ನಲ್ಲಿ, 15ನೇ ವಚನವು εὐαγγελίζω (*euangelizō*) ಎಂಬುದರ ಕ್ರಿಯಾಪದದ ರೂಪವನ್ನು ಹೊಂದಿದ್ದರೆ, 16ನೇ ವಚನವು εὐαγγέλιον (*euangelion*) ಎಂಬ ನಾಮಪದದ ರೂಪವನ್ನು ಉಪಯೋಗಿಸುತ್ತದೆ, ಅದು "ಸುವಾರ್ತೆ" ಎಂಬದಕ್ಕಾಗಿರುವ ಪದವಾಗಿದೆ (1:16, 17ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). KJV ಯು "*ಸುವಾರ್ತೆಯನ್ನು* ಸಾರುವವರ ಪಾದಗಳು ಎಷ್ಟೋ ಅಂದವಾಗಿವೆ . . . ಆದರೆ ಅವರೆಲ್ಲರೂ *ಸುವಾರ್ತೆಗೆ* ವಿಧೇಯರಾಗಲಿಲ್ಲ" ಎಂದು ಹೇಳುತ್ತದೆ (10:15, 16; ಒತ್ತಿ ಹೇಳಿದ್ದು ನನ್ನದು). ಸುವಾರ್ತೆಯು ಯೇಸುವಿನ ಕುರಿತಾದ ಶುಭ ಸುದ್ದಿಯಾಗಿರುತ್ತದೆ (ನೋಡಿರಿ 1 ಕೊರಿಂಥ 15:1-4).

17ನೇ ವಚನವು ಸಂದೇಶವನ್ನು "ಕ್ರಿಸ್ತನ ವಾಕ್ಯವೇ" ಎಂದು ಕರೆಯುತ್ತದೆ.[23] ಇದು ಕ್ರಿಸ್ತನು ಬೋಧಿಸಿದ ವಾಕ್ಯವನ್ನು (McCord) ಅಥವಾ ಕ್ರಿಸ್ತನ ಕುರಿತ ವಾಕ್ಯವನ್ನು (CEV; CJB; NLT) ಸೂಚಿಸಬಹುದಾಗಿದೆ. ಕ್ರಿಸ್ತನ ಕುರಿತ ವಾಕ್ಯವು 9ನೇ ವಚನದಲ್ಲಿರುವಂತಹ ವಾಸ್ತವಾಂಶಗಳನ್ನು ಒಳಗೊಂಡಿರುವದು: ಆತನು ಕರ್ತನು, ಮತ್ತು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು. ಬಹುಶಃ ಪೌಲನು "ಕ್ರಿಸ್ತನ ವಾಕ್ಯ" ಎಂಬುದರಲ್ಲಿ ಈ ಭಾವಗಳನ್ನು ಸಂಮಿಶ್ರಣಗೊಳಿಸಿರುತ್ತಾನೆ: "ಆ ವಾಕ್ಯಕ್ಕೆ ಕ್ರಿಸ್ತನೇ ಅಂತರಾರ್ಥ ಮತ್ತು

ಕೃತಿಕಾರ [ಎರಡೂ] ಆಗಿದ್ದಾನೆ."[24]

"ಕ್ರಿಸ್ತನ ವಾಕ್ಯವೇ" ಎಂಬುದು ಹೇಗೆ ಅರ್ಥನಿರೂಪಣೆ ಮಾಡಲ್ಪಟ್ಟರೂ ಸರಿಯೇ, ಮುಖ್ಯ ಒತ್ತು *ಕ್ರಿಸ್ತನನ್ನು* ಸಾರುವದರ ಮೇಲಿರುತ್ತದೆ. ಪೌಲನು ಗಲಾತ್ಯದವರಿಗೆ ಹೀಗೆ ಹೇಳಿದನು, "ನನಗಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳಪಡುವದು ಬೇಡವೇ ಬೇಡ" (ಗಲಾತ್ಯ 6:14). ಆತನು ಕೊರಿಂಥದವರಿಗೆ, "ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರತು ಬೇರೆ ಯಾವದನ್ನೂ ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು" ಎಂದು ಹೇಳಿದನು (1 ಕೊರಿಂಥ 2:2). ಇದರರ್ಥವು ಪೌಲನು ಶಿಲುಬೆಯ ವಿಷಯವನ್ನು ಬಿಟ್ಟರೆ ಬೇರೆ ವಿಷಯದ ಮೇಲೆ ಎಂದಿಗೂ ಬೋಧಿಸಲೇ ಇಲ್ಲವೆಂದಾಗಿರುವದಿಲ್ಲ. ಆತನು ಶಿಲುಬೆಗೆ ಸಂಬಂಧಪಟ್ಟಂತೆ ಹಾಗೂ ಶಿಲುಬೆಗೆ ಹೋಲಿಸುವಾಗ ಬೇರೆ ಏನನ್ನೂ "ತಿಳಿಯದವನಾಗಿ"ದ್ದನು ಎಂಬುದಂತೂ ನಿಜವಾದದ್ದು.

ನಮ್ಮಲ್ಲಿ ಉಪದೇಶ ಅಥವಾ ಬೋಧನೆ ಮಾಡುವವರು (ಅದರಲ್ಲಿ ಪ್ರತಿಯೊಬ್ಬ ಕ್ರೈಸ್ತನು ಸೇರಿರತಕ್ಕದ್ದು) ಪೌಲನಿಂದ ಕಲಿತುಕೊಳ್ಳುವ ಅಗತ್ಯವಿರುತ್ತದೆ. ನಮ್ಮ ಶ್ರೋತೃಗಳ ಹೃದಯಗಳಲ್ಲಿ ನಂಬಿಕೆಯನ್ನು ಹುಟ್ಟಿಸಬೇಕೆಂದರೆ, ನಾವು ಕ್ರಿಸ್ತನ ಮತ್ತು ಆತನ ಶಿಲುಬೆಯ ಮರಣದ ಕುರಿತು ಉಪದೇಶಿಸುವದನ್ನು ನಿರ್ಲಕ್ಷಿಸಕೂಡದು. ಈ "ಅದ್ಭುರಿಯಾದ ಪ್ರಾಚೀನ ಕಥೆಯು" ನಮ್ಮ ಸುವಾರ್ತೆಯ ಹೃದಯಭಾಗವಾಗಿರುವ ಹೊರತು, ಅದು *ಸುವಾರ್ತೆ*ಯ ಸಂದೇಶವೇ ಆಗಿರುವದಿಲ್ಲ.

3. *ರಕ್ಷಣೆಗಾಗಿ ದೇವರ ಯೋಜನೆಯ ಇನ್ನೊಂದು ಅಂಶವೆಂದರೆ ಗ್ರಹಿಕೆಯೊಂದಿಗೆ ಆಲಿಸುವದು ಮತ್ತು ಅಂಗೀಕರಿಸುವದು.* ನಮ್ಮ ವಾಕ್ಯಭಾಗದಲ್ಲಿ ಮತ್ತಷ್ಟು ಹಿಂದಕ್ಕೆ, 14b ನೇ ವಚನಕ್ಕೆ ಹೋಗುವಾಗ, ನಮಗೆ ಈ ಪ್ರಶ್ನೆಯು ಸಿಕ್ಕುತ್ತದೆ: **ಮತ್ತು ಆತನ ಸುದ್ಧಿ *ಕೇಳದಿರುವಲ್ಲಿ* ಆತನನ್ನು ನಂಬುವದು ಹೇಗೆ?** (ಒತ್ತಿ ಹೇಳಿದ್ದು ನನ್ನದು). ಸುವಾರ್ತೆಯನ್ನು ಸಾರುವದು ಸಾರುವವನ ಜವಾಬ್ದಾರಿಯಾಗಿದೆ, ಆದರೆ ಆತನು ಯಾರಿಗೆ ಸಾರುತ್ತಾನೋ ಅವರಿಗೆ ಸಹ ಒಂದು ಜವಾಬ್ದಾರಿಕೆಯಿರುತ್ತದೆ: ಅವರು ಕೇಳತಕ್ಕದ್ದು. 17ನೇ ವಚನವು ಹೀಗೆ ಹೇಳುತ್ತದೆ, "ಆದಕಾರಣ ಸಾರಿದ ಸುವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ." ಯೇಸು ಹೇಳಿದ ಬಿತ್ತುವವನ ಕುರಿತ ಸಾಮ್ಯವು ಗ್ರಹಿಕೆಯೊಂದಿಗೆ ಕೇಳಿಸಿಕೊಳ್ಳುವದು ಎಷ್ಟು ಪ್ರಾಮುಖ್ಯವಾದದ್ದು ಎಂಬದನ್ನು ಒತ್ತಿ ಹೇಳುತ್ತದೆ (ಮತ್ತಾಯ 13:3-9, 18-23).

ಅನೇಕರಿಗೆ ಓದುವದಕ್ಕೆ ಬರದೆ ಇರುತ್ತಿದ್ದ ಕಾಲದಲ್ಲಿ ಪೌಲನು ಬರೆದನು. ಅಷ್ಟುಮಾತ್ರವಲ್ಲದೆ, ಸಾಧಾರಣ ವ್ಯಕ್ತಿಗೆ ಕೈಯಿಂದ ನಕಲು ಮಾಡಿದ ಹಸ್ತಪ್ರತಿಗಳನ್ನು ಪಡೆದುಕೊಳ್ಳುವದು ಅತ್ಯಂಥ ದುಬಾರಿಯಾಗಿರುತ್ತಿತ್ತು. ಜನರು ಶುಭವಾರ್ತೆಯನ್ನು *ಕೇಳದವ*ರಾಗಿದ್ದಿದ್ದರೆ, ಬಹುಮಂದಿ ಅದನ್ನು ಎಂದಿಗೂ ತಿಳಿಯದೆ ಇರುತ್ತಿದ್ದರು. ಇಂದು, ಬಹಳಷ್ಟು ಜನರು ಓದಬಲ್ಲರು, ಆದ್ದರಿಂದ ದೇವರ ವಾಕ್ಯವನ್ನು *ಓದುವದ* ರಿಂದ ನಂಬಿಕೆಯು ಬರುತ್ತದೆ (ನೋಡಿರಿ ಯೋಹಾನ 20:30, 31). ಹೇಗಿದ್ದರೂ, ವಾಕ್ಯವನ್ನು ಕೇಳುವದು ಈಗಲೂ ಸಮರ್ಥ ಪರಿಣಾಮವನ್ನು ಬೀರಬಲ್ಲದ್ದಾಗಿದೆ. ಸುವಾರ್ತೆಯ ಶಕ್ತಿಗೆ (ನೋಡಿರಿ 1:16) ಸಾರುವವನ ಪ್ರಭಾವವು ಸೇರಿಸಲ್ಪಡುತ್ತದೆ, ಆತನು, ಆ ಮೂಲಕ,

ದೇವರು ಹೇಳಿರುವಂತದ್ದು ಸತ್ಯವೇ ಎಂದು ದೃಢಪಡಿಸುತ್ತಾನೆ.

14 ಮತ್ತು 17 ವಚನಗಳಲ್ಲಿನ "ಕೇಳುವದು," ಮತ್ತು "ಕೇಳುವದರಿಂದ," ಮತ್ತು "ಕೇಳಿದ್ದರೆ" ಎಂಬುವುಗಳ ಗ್ರೀಕ್ ಪದಗಳೆಲ್ಲವೂ ἀκούω (*akouō*) ಎಂಬ ಪದದ ರೂಪಗಳಾಗಿರುತ್ತವೆ—ಆ ಪದದಿಂದ ನಮಗೆ "acoustic" (ಶ್ರವಣೇಂದ್ರಿಯ) ಎಂಬ ಪದವು ಸಿಕ್ಕುತ್ತದೆ. ಈ ವಚನಗಳಲ್ಲಿ, "ಕೇಳುವದು" ಕೇವಲ ಹೇಳಲ್ಪಟ್ಟ ಒಂದು ಸಂಗತಿಯು ಕೇಳುವವನ ಮನಸಾಕ್ಷಿಯೊಳಗೆ ದಾಖಲಾಗುವಂತಹ ಒಂದು ಪ್ರಕ್ರಿಯೆ ಎಂದಷ್ಟೆ ಸೂಚಿಸುವದಾಗಿರುವದಿಲ್ಲ. ಅದು ಗ್ರಹಿಕೆಯೊಂದಿಗೆ ಆಲಿಸುವದು ಮತ್ತು ಅಂಗೀಕರಿಸಿಕೊಳ್ಳುವದು ಎಂಬುದಾಗಿ ಸನ್ನಿವೇಶವು ಸೂಚಿಸುತ್ತದೆ. ಯೇಸುವು ತನ್ನ ಉಪದೇಶವನ್ನು ಅಂಗೀಕರಿಸಿಕೊಳ್ಳಲು ನಿರಾಕರಿಸಿದವರ ಬಗ್ಗೆ ಮಾತಾಡುವಾಗ, ಅವರು ಕಿವಿಯಿದ್ದು ಕೇಳಿದರೂ ತಿಳುಕೊಳ್ಳಲಾರರು ಎಂದು ಹೇಳಿದನು (ಮಾರ್ಕ 4:12).

ಪೌಲನು ಕೇಳಿದ ಪ್ರಶ್ನೆಯಲ್ಲಿ ಒಂದು ಆಸಕ್ತಿಕರವಾದ ವಿವರವು ಕಾಣಿಸಿಕೊಳ್ಳುತ್ತದೆ. ಅದನ್ನು ಪುನಃ ನೋಡಿರಿ: "ಆತನ ಸುದ್ದಿ ಕೇಳದಿರುವಲ್ಲಿ ಆತನನ್ನು ನಂಬುವದು ಹೇಗೆ?" ಇಲ್ಲಿ ಪೌಲನ ತಾತ್ಪರ್ಯವು, "ಯಾವಾತನ ಬಗ್ಗೆ ಅವರು ಕೇಳಲಿಲ್ಲವೋ ಆತನನ್ನು ಅವರು ಹೇಗೆ ನಂಬುವರು?" ಎಂದಾಗಿರುವ ಸಾಧ್ಯತೆಯಿದೆ (ನೋಡಿರಿ KJV; NIV), ಆದರೆ "ಆತ*ನ* ಸುದ್ದಿ ಕೇಳದಿರುವಲ್ಲಿ" ಎಂಬುದು ಗ್ರೀಕ್ ವಾಕ್ಯದ ಹೆಚ್ಚು ಅಕ್ಷರಶಃ ಅನುವಾದವೆಂದು ಪರಿಗಣಿಸಲ್ಪಟ್ಟಿರುತ್ತದೆ. ನಾವು "ಕ್ರಿಸ್ತನ ವಾಕ್ಯ" ವನ್ನು ಸಾರುವಾಗ, ಕ್ರಿಸ್ತನು ನಮ್ಮ *ಮೂಲಕ* ಸಾರಲ್ಪಡುತ್ತಾನೆ ಎಂಬ ವಾಸ್ತವಾಂಶವನ್ನು ಪೌಲನು ಮನಸ್ಸಿನಲ್ಲಿ ಹೊಂದಿದ್ದರಬಹುದಾಗಿದೆ. ಯೇಸು ತನ್ನ ಶಿಷ್ಯರನ್ನು ಸಾರುವ ಪ್ರವಾಸಕ್ಕಾಗಿ ಕಳುಹಿಸುವ ವೇಳೆ, ಆತನು ಅವರಿಗೆ, "ನಿಮ್ಮ ಮಾತನ್ನು ಕೇಳುವವನು ನನ್ನ ಮಾತನ್ನು ಕೇಳುವವನಾಗಿದ್ದಾನೆ; ನಿಮ್ಮನ್ನು ಅಲಕ್ಷ್ಯಮಾಡುವವನು ನನ್ನನ್ನು ಅಲಕ್ಷ್ಯಮಾಡುವವನಾಗಿದ್ದಾನೆ" (ಲೂಕ 10:16). McGuiggan ಹೀಗೆ ವ್ಯಾಖ್ಯಾನಿಸುತ್ತಾನೆ,

> ಕ್ರಿಸ್ತನೇ ತನ್ನ ಸಂದೇಶಕರ ಮೂಲಕವಾಗಿ ಸಂಧಾನವಾಗುವಂತೆ ಜನರನ್ನು ಬೇಡಿಕೊಳ್ಳುತ್ತಿರುವನು. ಅದೊಂದು ವಿಸ್ಮಯಕಾರಿ ಸಂಗತಿಯಲ್ಲವೇ?! ಅದು ಆದೇಶಿಸಲ್ಪಟ್ಟ ಸಾರುವಿಕೆಗೆ ಹಿರಿಮೆಯನ್ನು (ಇಲ್ಲ, ಹಿರಿಮೆಗಿಂತಲೂ ಹೆಚ್ಚಿನದು! ಭಯಭಕ್ತಿ ಹುಟ್ಟಿಸುವ ವೈಭವತೆ) ಒದಗಿಸುವದಿಲ್ಲವೇ?! ನಿಜವಾದ ಸಾರುವಿಕೆಯಲ್ಲಿ *ಕ್ರಿಸ್ತನು* ತನ್ನನ್ನು ವಿಶ್ವಾಸಿಸುವಂತೆ ಜನರನ್ನು ಬೇಡುವವನಾಗಿದ್ದಾನೆ.[25]

4. *ದೇವರ ಯೋಜನೆಯ ಪ್ರಕಾರವಾಗಿ, ಸುವಾರ್ತೆಯ ಸಂದೇಶಕ್ಕೆ ಪ್ರತ್ಯುತ್ತರವೆಂದರೆ ವಿಧೇಯತೆಯುಳ್ಳ ನಂಬಿಕೆಯನ್ನಿಡುವದು.* ಅದು ನಮ್ಮನ್ನು 14a ರಲ್ಲಿ ಸಿಕ್ಕುವ ಮೊದಲ ಪ್ರಶ್ನೆಗೆ ತರುತ್ತದೆ: **ಆದರೆ ನಾವು ಯಾವನನ್ನು *ನಂಬಲಿಲ್ಲವೋ* ಆತನ ನಾಮವನ್ನು ಹೇಳಿಕೊಳ್ಳುವದು ಹೇಗೆ?** (ಒತ್ತಿ ಹೇಳಿದ್ದು ನನ್ನದು). ಪೌಲನು 17ನೇ ವಚನದಲ್ಲಿ "ಸಾರಿದ ಸುವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ" ಎಂದು ಹೇಳಿದನು. ನಾವು ಯಥಾರ್ಥ ಹೃದಯಗಳುಳ್ಳವರಾಗಿ—ಕೇವಲ ಒಂದು ಬುದ್ಧಿಯಿಂದ ಮಾಡುವ ಕ್ರಿಯೆಯಂತಲ್ಲದೆ—ಗಮನವಿಟ್ಟು ಸುವಾರ್ತೆಯನ್ನು ಕೇಳಿಸಿಕೊಳ್ಳುವದಾದರೆ ಅದರ ಫಲಿತವು ನಂಬಿಕೆಯೇ ಆಗುವದು. ಇದು ನಮ್ಮನ್ನು ಪುನಃ ರೋಮಾಪುರದವರಿಗೆ

ಪುಸ್ತಕದ ಒಂದು ಪ್ರಮುಖ ಭಾವನೆಗೆ ಕರೆತರುತ್ತದೆ: ನಂಬಿಕೆಯ ಅವಶ್ಯಕತೆ. ಯೇಸು ಹೀಗೆ ಹೇಳಿದನು, "ನನ್ನನ್ನು ಆತನೆಂದು [ಮೆಸ್ಸೀಯನೆಂದು] ನೀವು ನಂಬದೆ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿರಿ" (ಯೋಹಾನ 8:24).

10:14ರಲ್ಲಿನ ನಂಬಿಕೆಯು ಒಂದು ಸತ್ತಂತಹ, ಗೊಡ್ಡಾದ ನಂಬಿಕೆಯಲ್ಲ (ನೋಡಿರಿ ಯಾಕೋಬ 2:17, 26); ಅದೊಂದು ಜೀವವುಳ್ಳ, ಸಕ್ರಿಯವಾದ, ವಿಧೇಯತೆಯುಳ್ಳ ನಂಬಿಕೆಯಾಗಿರುತ್ತದೆ (10:16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). "ವಿಧೇಯತೆಯುಳ್ಳ ನಂಬಿಕೆಯು" ಏನೇನನ್ನು ಒಳಗೊಂಡಿರುತ್ತದೆ (1:5; 16:26)? ಪೌಲನು ಪಶ್ಚಾತಾಪವನ್ನು (2:4), ಅರಿಕೆಮಾಡುವದನ್ನು (10:9, 10), ದೀಕ್ಷಾಸ್ನಾನ (6:3-6), ಮತ್ತು ಶರೀರಭಾವವನ್ನು ಅನುಸರಿಸದೆ ಪವಿತ್ರಾತ್ಮನ ಅನುಸಾರವಾಗಿ ಜೀವಿಸುವದರ (8:4) ಬಗ್ಗೆ ಚರ್ಚಿಸಿದ್ದನು.

5. *ಯೋಜನೆಯ ಅಂತಿಮವಾದ ಅಂಶವೆಂದರೆ ಕರ್ತನ ಹೆಸರನ್ನು ಹೇಳಿಕೊಳ್ಳುವದು.* 14 ಮತ್ತು 15ನೇ ವಚನಗಳು ಈ ಉಲ್ಲೇಖನವನ್ನು ಮುನ್ನುಡಿಯಾಗಿ ಹೊಂದಿವೆ: "ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದೆಂದು ಬರೆದದೆ" (10:13; ಒತ್ತಿ ಹೇಳಿದ್ದು ನನ್ನದು). "ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ" ಎಂಬ ಪದಗುಚ್ಛದಲ್ಲಿ ಏನು ಅಡಕವಾಗಿರುತ್ತದೆಂಬುದನ್ನು ನಾವು ಈಗಾಗಲೇ ಚರ್ಚಿಸಿದ್ದೇವೆ (10:13ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ನಮ್ಮ ನಂಬಿಕೆಯು ಕೆಲವೊಂದು ವಾಸ್ತವಾಂಶಗಳನ್ನು ಮಾನಸಿಕವಾಗಿ ಅಂಗೀಕರಿಸಿಕೊಳ್ಳುವದಷ್ಟೇ ಆಗಿರುವದಿಲ್ಲ, ಆದರೆ ಯೇಸುವಿನ ಕುರಿತಾದ ಶುಭವಾರ್ತೆಗೆ ಒಂದು ಹೃಯದಪೂರ್ವಕವಾದ ಪ್ರತಿಸ್ಪಂದಿಸುವಿಕೆಯಾಗಿರುತ್ತದೆ—ಮತ್ತು ಅದು ನಾವು ಕರ್ತನ ಮತ್ತು ಆತನ ಮಾರ್ಗದೆಡೆಗೆ ತಿರುಗಿಕೊಳ್ಳುವದರಲ್ಲಿ ಫಲಿತವಾಗತಕ್ಕದ್ದು.

ಈಗ ನಾವು ದೇವರ ಪರಿಪೂರ್ಣವಾದ ಯೋಜನೆಯ ಸ್ಥೂಲ ಸಮೀಕ್ಷೆಗಾಗಿ ಸಿದ್ಧರಾಗಿರತಕ್ಕದ್ದು:

1. ಒಂದು ದೈವಿಕ ಆದೇಶ
2. ಸುವಾರ್ತೆಯನ್ನು ಸಾರುವಿಕೆ
3. ಗ್ರಹಿಕೆಯೊಂದಿಗೆ ಆಲಿಸುವದು ಮತ್ತು ಅಂಗೀಕರಿಸಿಕೊಳ್ಳುವದು
4. ವಿಧೇಯತೆಯುಳ್ಳ ನಂಬಿಕೆ
5. ಕರ್ತನ ನಾಮವನ್ನು ಹೇಳಿಕೊಳ್ಳುವದು

ನಾಲ್ಕನೆಯ ಅಂಶವಿಲ್ಲದೆ ಐದನೆಯದು ಸಾಧ್ಯವಿಲ್ಲ, ಮೂರನೆಯದಿಲ್ಲದೆ ನಾಲ್ಕನೆಯದು ಸಾಧ್ಯವಿಲ್ಲ, ಮತ್ತು ಅದೇ ರೀತಿ ಉಳಿದವುಗಳು ಸಹ—ಮೊದಲ ಸಂಗತಿಯ ವರೆಗೂ—ಎಂಬದನ್ನು ಪೌಲನು ತೋರಿಸಿ ಕೊಟ್ಟನು. ಇಲ್ಲಿ ಸಿಕ್ಕುವ ಒಂದು ಪ್ರಾಥಮಿಕ ಸತ್ಯವೆಂದರೆ ಸುವಾರ್ತೆಯನ್ನು ಸಾರುವವರು ಒಂದು ದೈವಿಕ ಆದೇಶವನ್ನು ಹೊಂದಿದ್ದರು ಎಂಬುದೆ. ದೇವರು ಈ ಯೋಜನೆಯನ್ನು ಚಾಲನೆಗೊಳಿಸಿದ್ದನು, ಅದು ಯೆಹೂದ್ಯರು ಮತ್ತು ಅನ್ಯಜನರು ಇಬ್ಬರಿಗಾಗಿಯೂ ಇರುವ ಯೋಜನೆ (10:12). ಈ ವಿಧದಲ್ಲಿ, ದೇವರು ಇಸ್ರಾಯೇಲ್ಯರ ರಕ್ಷಣೆಗೋಸ್ಕರ ದಾರಿಯನ್ನು ಒದಗಿ*ಸಿದ್ದನು.*

**ವಚನ 15b**. ನಾವು ಇತರರಿಗೆ ಸುವಾರ್ತೆಯನ್ನು ಹೇಳುವದೇ ಆದಲ್ಲಿ, ನಮ್ಮ ದೇಹದ ಎರಡು ಅಂಗಗಳು ಅಂದವಾದವುಗಳೆಂದು ಪೌಲನು ಹೇಳುತ್ತಾನೆ. ನಮ್ಮ ಮುಖಗಳು ಆಕರ್ಷಕವಾದವುಗಳಲ್ಲ ಎಂದು ನಾವು ಭಾವಿಸಬಹುದು, ಅಥವಾ ನಮ್ಮ ದೇಹದಲ್ಲಿ ಪರಿಪೂರ್ಣತೆಯ ಕೊರತೆಯಿದೆ ಎಂದು ಯೋಚಿಸಬಹುದು; ಆದರೆ ಪೌಲನು ನಮ್ಮ ಪಾದಗಳು ಅಂದವಾಗಿವೆ ಎಂದು ಹೇಳುತ್ತಾನೆ: **ಇದಕ್ಕೆ ಸರಿಯಾಗಿ ಶುಭದ ವಾರ್ತೆಯನ್ನು ಸಾರುವವರ ಪಾದಗಳು ಎಷ್ಟೋ ಅಂದವಾಗಿವೆ ಎಂದದು ಬರೆದದೆ.** ಪೌಲನು ಯೆಶಾಯ 52:7ರಿಂದ ಉಲ್ಲೇಖಿಸುತ್ತಿದ್ದಾನೆ, ಅದು ಬಾಬಿಲೋನಿನ ಸೆರೆವಾಸದಲ್ಲಿದ್ದ ಯೆಹೂದ್ಯರಿಗೆ ಅವರ ಬಿಡುಗಡೆಯ ಶುಭವಾರ್ತೆಯನ್ನು ತರುವಂಥವರನ್ನು ಸೂಚಿಸುವದಾಗಿರುತ್ತದೆ. ಇಡೀ ವಚನವು ಹೀಗೆ ಇರುತ್ತದೆ,

> ಪರ್ವತಗಳ ಮೇಲೆ ತ್ವರೆಪಡುತ್ತಾ ಶುಭ ಸಮಾಚಾರವನ್ನು ತಂದು ಸಮಾಧಾನವನ್ನು ಸಾರುವ ದೂತನ ಪಾದಗಳು ಎಷ್ಟೋ ಅಂದವಾಗಿವೆ! ಒಳ್ಳೇಯ ಶುಭವರ್ತಮಾನವನ್ನು, ಶುಭದ ಸುವಾರ್ತೆಯನ್ನು ತಂದು ರಕ್ಷಣೆಯನ್ನು ಪ್ರಕಟಿಸುತ್ತಾ—ನಿನ್ನ ದೇವರು ರಾಜ್ಯಭಾರವನ್ನು ವಹಿಸಿದ್ದಾನೆ ಎಂದು ಚೀಯೋನಿಗೆ ತಿಳಿಸುವವನಾಗಿದ್ದಾನೆ.

ಪೌಲನು ಯೆಶಾಯನ ಆ ಮಾತುಗಳನ್ನು ಕಳೆದುಹೋಗಿರುವವರಿಗೆ ಪಾಪದ ಬಂಧನದಿಂದ ಅವರು ಬಿಡುಗಡೆಗೊಳಿಸಲ್ಪಡುವರು ಎಂಬ ಶುಭವಾರ್ತೆಯನ್ನು ಸಾರುವಂಥವರಿಗೆ ಅನ್ವಯಿಸುತ್ತಾನೆ.

**ವಚನ 16.** ದೇವರು ಯೆಹೂದ್ಯರನ್ನು ರಕ್ಷಿಸುವದಕ್ಕಾಗಿ ಪರಿಪೂರ್ಣವಾದ ಯೋಜನೆಯನ್ನು ಹೊಂದಿದ್ದಾಗ್ಯೂ, ದುರಾದೃಷ್ಟಕರವಾಗಿ ಅವರು ಕೇಳುವದಕ್ಕೆ ನಿರಾಕರಿಸಿದ್ದರು, ನಂಬುವದಕ್ಕೆ ವಿಫಲರಾಗಿದ್ದರು, ಮತ್ತು ಯೇಸುವಿಗೆ ಅಧೀನರಾಗುವದಕ್ಕೆ ನಿರಾಕರಿಸಿದ್ದರು. 16ನೇ ವಚನವು ಹೀಗೆ ಆರಂಭಗೊಳ್ಳುತ್ತದೆ, **ಆದರೂ ಆ ಶುಭವರ್ತಮಾನಕ್ಕೆ ಎಲ್ಲರೂ ಕಿವಿಗೊಡಲಿಲ್ಲ.** ಸನ್ನಿವೇಶದಲ್ಲಿ, "ಎಲ್ಲರೂ" ಎಂಬುದು ಯೆಹೂದ್ಯರನ್ನು ಸೂಚಿಸುತ್ತದೆ (ನೋಡಿರಿ NIV). "ಆ ಶುಭವರ್ತಮಾನಕ್ಕೆ ಎಲ್ಲರೂ ಕಿವಿಗೊಡಲಿಲ್ಲ" ಎಂಬುದು ಪೌಲನಿಂದ ಹೇಳಲ್ಪಟ್ಟ ಒಂದು ವಿಶಿಷ್ಟವಾದ ನ್ಯೂನೋಕ್ತಿಯಾಗಿರುತ್ತದೆ ಯಾಕೆಂದರೆ ಇಸ್ರಾಯೇಲ್ಯರಲ್ಲಿ ಸ್ವಲ್ಪ ಪ್ರಮಾಣದವರು ಮಾತ್ರವೇ ("ಒಂದು ಅಂಶ"; 9:27) ಸುವಾರ್ತೆಗೆ ಪ್ರತಿಸ್ಪಂದಿಸಿದ್ದರು.

"ಕಿವಿಗೊಡಲಿಲ್ಲ" ಎಂಬುದು ὑπακούω (*hupakouō*) ಎಂಬುದರ ಅನುವಾದವಾಗಿದೆ, ಅದೊಂದು ಸಂಯುಕ್ತ ಪದವಾಗಿದ್ದು ἀκούω (*akouō,* "ಕೇಳು") ಎಂಬುದನ್ನು ὑπό (*hupo*, "ಕೆಳಗೆ") ಎಂಬ ಪದದೊಂದಿಗೆ ಜೋಡಿಸುವದಾಗಿದೆ.[26] *Hupakouō* ಎಂಬುದು ಒಪ್ಪಿಸಿಕೊಡುವಿಕೆ ಮತ್ತು ವಿಧೇಯತೆಯಲ್ಲಿ ಫಲಿತವಾಗುವಂಥ ಗ್ರಹಿಕೆಯುಳ್ಳ ಆಲಿಸುವಿಕೆಯನ್ನು ಸೂಚಿಸುತ್ತದೆ. CJB ಯು 16ನೇ ವಚನವನ್ನು ಹೀಗೆ ಭಾವಾರ್ಥಗೊಳಿಸುತ್ತದೆ: "ಸಮಸ್ಯೆಯೇನೆಂದರೆ ಅವರೆಲ್ಲರೂ ಶುಭವಾರ್ತೆಗೆ ಗಮನವನ್ನು ಕೊಡಲಿಲ್ಲ ಮತ್ತು ವಿಧೇಯರಾಗಲಿಲ್ಲ." 16ನೇ ವಚನದಲ್ಲಿನ *hupakouō* ಎಂಬ ಪದವನ್ನು ಅನುವಾದಿಸುವದಕ್ಕೆ ಹಲವಾರು ತರ್ಜುಮೆಗಳು "ವಿಧೇಯವಾಗು" ಎಂಬುದರ ರೂಪಗಳನ್ನು ಉಪಯೋಗಿಸಿರುತ್ತವೆ (KJV; NKJV; NRSV; McCord).[27]

NASBಯು *hupakouō*ವನ್ನು ಏಕೆ "ವಿಧೇಯವಾಗು" ಎಂದು ಅನುವಾದಿಸದಿರುವದಕ್ಕೆ ಕಾರಣವೇನೆಂದರೆ 16ನೇ ವಚನದಲ್ಲಿ ಅದು ಸ್ಪಷ್ಟವಾಗಿ ಕಂಡುಬರುವದಿಲ್ಲ ಎಂಬುದೆ. ರೋಮಾಪುರದವರಿಗೆ ಪತ್ರಿಕೆಯ ಇತರ ಭಾಗಗಳಲ್ಲಿ, NASBಯು "ವಿಧೇಯತ್ವ" ಮತ್ತು "ಅಧೀನರಾದದರಿಂದಲೂ" ಎಂಬುದಾಗಿ ಗ್ರೀಕ್ ಪದದ ವಿವಿಧ ರೂಪಗಳನ್ನು ಉಪಯೋಗಿಸಿರುತ್ತದೆ (1:5; 6:17; 16:26), ಆದರೆ ಇಲ್ಲಿ ಹಾಗೆ ಉಪಯೋಗಿಸಿರುವದಿಲ್ಲ. ಬಹುಶಃ ಅನುವಾದಕರು "ಕಿವಿಗೊಡಲಿಲ್ಲ" ಎಂಬುದು ವಿಧೇಯತೆಯ ಆಲೋಚನೆಯನ್ನು ವ್ಯಕ್ತಪಡಿಸುತ್ತದೆಂದು, ಅದೇ ವೇಳೆಯಲ್ಲಿ "ಕೇಳುವದು" ಮತ್ತು "ನಂಬಿಕೆಯಿಡುವದು" ಎಂಬುದಕ್ಕೆ ಸರಿಯಾಗಿ ಹೊಂದಿಕೆಯಾಗುತ್ತದೆಂದು ಯೋಚಿಸಿರಬಹುದಾಗಿದೆ. ಅವರು ಕಾರಣವು ಏನೇ ಆಗಿದ್ದರೂ, KJV ಯು 16ನೇ ವಚನದ ಮೊದಲ ಭಾಗದ ಅಕ್ಷರಶಃ ಅನುವಾದವಾಗಿರುತ್ತದೆಂಬದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು: "ಆದರೆ ಅವರೆಲ್ಲರೂ ಸುವಾರ್ತೆಗೆ ವಿಧೇಯರಾಗಲಿಲ್ಲ."[28]

ದೇವರಿಗೆ ಇದು ಆಶ್ಚರ್ಯವನ್ನೇನೂ ಉಂಟು ಮಾಡಲಿಲ್ಲ ಎಂಬುದನ್ನು ಪೌಲನು ಸ್ಪಷ್ಟಗೊಳಿಸಿದನು: **ಈ ವಿಷಯದಲ್ಲಿ ಯೆಶಾಯನು—ಕರ್ತನೇ, ನಾವು ಸಾರಿದ ವಾರ್ತೆಯನ್ನು ಯಾರು ನಂಬಿದರು ಎಂದು ನುಡಿಯುತ್ತಾನೆ.** ಈ ಉಲ್ಲೇಖನವು ಒಬ್ಬ ಬಾಧೆ ಪಡುವ ಸೇವಕನಾಗಿ ಮೆಸ್ಸೀಯನನ್ನು ಬಣ್ಣಿಸುವಂಥ ಮಹಾ ಅಧ್ಯಾಯವಾಗಿರುವ ಯೆಶಾಯ 53ನೇ ಅಧ್ಯಾಯದ ಪ್ರಾರಂಭಿಕ ವಚನವಾಗಿರುತ್ತದೆ. ಬಹುಪಾಲು ಯೆಹೂದ್ಯರು ಮೆಸ್ಸೀಯನನ್ನು ಒಬ್ಬ ಗೆಲ್ಲುತ್ತಾ ಸಾಗುವ ಪರಾಕ್ರಮಶಾಲಿ ವೀರನೆಂದು ಯೋಚಿಸುವದಕ್ಕೆ ಇಷ್ಟ ಪಟ್ಟರು. ಈ ಕಾರಣಕ್ಕೆ, ಯೆಶಾಯ 53ನೇ ಅಧ್ಯಾಯವು ಮೆಸ್ಸೀಯನ ಕುರಿತ ಪ್ರವಾದನೆ ಎಂಬುದನ್ನು ಅವರಲ್ಲಿ ಬಹುಮಂದಿ ನಂಬಲಿಲ್ಲ (ಅಪೊಸ್ತಲರ ಕೃತ್ಯಗಳು 8:32-34). ಆ ವಿಧವಾದ ಪೂರ್ವಕಲ್ಪಿತ ಅಭಿಪ್ರಾಯವೇ ಅಂತಿಮವಾಗಿ ಮೆಸ್ಸೀಯನು (ಯೇಸು) ಬಂದಾಗ ಅವರು ಆತನನ್ನು ತಿರಸ್ಕರಿಸುವಂತೆ ಮಾಡಿತು (ನೋಡಿರಿ ಯೋಹಾನ 12:37-41).

16ನೇ ವಚನದಲ್ಲಿನ "ಕಿವಿಗೊಡಲಿಲ್ಲ" ಮತ್ತು "ನಂಬಿದರು" ಎಂಬ ಪದಗಳು ವಿನಿಮೇಯವಾಗಿ ಉಪಯೋಗಿಸಲ್ಪಟ್ಟಿವೆ (ನೋಡಿರಿ ಯೋಹಾನ 3:36; ಇಬ್ರಿಯ 3:18, 19). ಪುನಃ, KJV ತರ್ಜುಮೆಯನ್ನು ಪರಿಗಣಿಸೋಣ: "ಆದರೆ ಅವರೆಲ್ಲರೂ ಸುವಾರ್ತೆಗೆ *ವಿಧೇಯ*ರಾಗಲಿಲ್ಲ. ಆದದರಿಂದ ಯೆಶಾಯನು—ಕರ್ತನೇ, ನಮ್ಮ ವಾರ್ತೆಯನ್ನು ಯಾರು *ನಂಬಿದರು* ಅನ್ನುತ್ತಾನೆ" (ಒತ್ತಿ ಹೇಳಿದ್ದು ನನ್ನದು). ಪೌಲನು ಇಲ್ಲಿ ಹೇಳುವ ಮಾತುಗಳು ಆತನು ಬೇರೆ ಕಡೆಯಲ್ಲಿ ನಂಬಿಕೆಯಿಂದ ನೀತಿವಂತರೆಂಬ ನಿರ್ಣಯದ ಕುರಿತು ಹೇಳಿದ ಮಾತುಗಳೊಂದಿಗೆ ಸಮಂಜಸವಾಗಿರುತ್ತವೆ. ನಾವು ನಂಬಿಕೆಯ ಆಧಾರದಲ್ಲಿ ರಕ್ಷಿಸಲ್ಪಟ್ಟಿದ್ದೇವೆ, ಆದರೆ ಅದೊಂದು ಮಿಡಿಯುತ್ತಿರುವ, ಸಕ್ರಿಯವಾಗಿರುವ ನಂಬಿಕೆಯಾಗಿರುತ್ತದೆ. Larry Deason ಅದನ್ನು ಈ ರೀತಿಯಲ್ಲಿ ಹೇಳುತ್ತಾನೆ: "ರೋಮಾ 10ನೇ ಅಧ್ಯಾಯದಲ್ಲಿ ಪೌಲನು ಹೇಳುವ ಅಂಶವು 'ನಂಬಿಕೆಯಿಂದ ನೀತಿವಂತಿಕೆ' ಎಂಬುದನ್ನು 'ವಿಧೇಯತೆ'ಯ ಅವಶ್ಯಕತೆಗೆ ವಿರುದ್ಧ ಹೋಲಿಕೆ ಮಾಡುವದಕ್ಕಲ್ಲ, ಆದರೆ ನೀತಿಯನ್ನು ಪಡೆಯುವದಕ್ಕಾಗಿ ಅನುಸರಿಸುವ ಸ್ವಾವಂಭನೆ (ನೇಮನಿಷ್ಠೆಗಳು) ದಾರಿ ಮತ್ತು ಕ್ರಿಸ್ತಾವಲಂಭನೆ ದಾರಿ (ವಿಧೇಯತೆಯುಳ್ಳ ನಂಬಿಕೆ) ನಡುವೆ ಒಂದು ಸ್ಪಷ್ಟವಾದ ವ್ಯತ್ಯಾಸವನ್ನು ತೋರಿಸುವದೇ ಆಗಿತ್ತು."[29]

**ವಚನ 17.** ಪೌಲನು ರೋಮಾ 10:13-15ರಲ್ಲಿ ವಿವರಿಸಲಾಗಿರುವ ಯೋಜನೆಯ ಒಂದು ಕ್ಲುಪ್ತವಾದ ಸಾರಾಂಶವನ್ನು ಕೊಡುತ್ತಾನೆ: **ಆದಕಾರಣ ಸಾರಿದ ಸುವಾರ್ತೆಯು ನಂಬಿಕೆಗೆ** [ಅಂಗೀಕಾರದೊಂದಿಗೆ] **ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ.** ಅದೊಂದು ಪರಿಪೂರ್ಣವಾದ ಯೋಜನೆಯಾಗಿತ್ತು, ಹಾಗಾದರೆ ಯಾರು ಅದನ್ನು ಅಸ್ತವ್ಯಸ್ತಗೊಳಿಸಿದರು? ಸ್ವತಃ ಯೆಹೂದ್ಯರೇ ಯೇಸುವಿನ ಸಂದೇಶವನ್ನು ಗಂಭೀರತೆಯಿಂದ ಕೇಳುವದಕ್ಕೆ ನಿರಾಕರಿಸುವವರಾಗಿ ತಪ್ಪನ್ನು ಮಾಡಿದರು. ಭೂಮಿಯ ಮೇಲಿನ ತನ್ನ ಸೇವೆಯ ವೇಳೆಯಲ್ಲಿ, ಯೇಸು ಯೆಶಾಯ 6:10ರಿಂದ ಉಲ್ಲೇಖಿಸಿದನು: ಈ ಜನರು ಹೃದಯವು ಕೊಬ್ಬಿತು; ಇವರ ಕಿವಿ ಮಂದವಾಯಿತು; . . . ಕಿವಿಯಿಂದ ಕೇಳಿ ಹೃದಯದಿಂದ ತಿಳಿದು ನನ್ನ ಕಡೆಗೆ ತಿರುಗಿಕೊಂಡು ನನ್ನಿಂದ ಸ್ವಸ್ಥತೆಯನ್ನೂ ಹೇಗೂ ಹೊಂದಬಾರದೆಂದು ಮಾಡಿಕೊಂಡಿದ್ದಾರೆ (ಮತ್ತಾಯ 13:15). ಕೆಲವು ಯೆಹೂದ್ಯರು ತನ್ನ ಜೊತೆ ಆಟಗಾರನ ಶಬ್ದವನ್ನು *ಕೇಳಿಸಿಕೊಳ್ಳಲಾಗದಂತೆ* ತನ್ನ ಕಿವಿಯನ್ನು ಮುಚ್ಚಿಕೊಳ್ಳುವ ಒಬ್ಬ ಮಗುವಿನ ರೀತಿಯಲ್ಲಿದ್ದರು. ಇನ್ನು ಕೆಲವರು ಕೆಲಸದಲ್ಲಿ ಮಗ್ನರಾಗಿ *ಕೇಳಿಸಿಕೊಳ್ಳಲಾರದ* ಪ್ರಾಯಸ್ಥರಂತಿದ್ದರು. ಕಾರಣವು ಏನೇ ಆಗಿರಬಹುದು, ಅನೇಕ ಯೆಹೂದ್ಯರು ಕೇಳಿಸಿಕೊಳ್ಳಲು ವಿಫಲರಾದರು ಮತ್ತು ಆ ಕಾರಣದಿಂದ ನಂಬುವದಕ್ಕೆ ವಿಫಲಗೊಂಡರು.

## ಯೆಹೂದ್ಯರು ಸಂದೇಶವನ್ನು ತಿರಸ್ಕರಿಸಿದ್ದು (10:18-21)

**18ಆದರೂ ಅವರ ಕಿವಿಗೆ ಬೀಳಲಿಲ್ಲವೇನು ಎಂದು ಕೇಳುತ್ತೇನೆ. ಬಿದ್ದದ್ದು ನಿಶ್ಚಯ.**
**ಸಾರುವವರ ಧ್ವನಿಯು ಭೂಮಿಯಲ್ಲೆಲ್ಲಾ ಪ್ರಸರಿಸಿತು,**
**ಅವರ ನುಡಿಗಳು ಲೋಕದ ಕಟ್ಟಕಡೆಯ ವರೆಗೂ ವ್ಯಾಪಿಸಿದವು.**
**19ಆದರೆ ಇಸ್ರಾಯೇಲ್ಯರು ಆ ವಾರ್ತೆಯನ್ನು ತಿಳುಕೊಳ್ಳಲಿಲ್ಲವೇನು ಎಂದು ಕೇಳುತ್ತೇನೆ. ಈ ವಿಷಯದಲ್ಲಿ—**
**ಜನಾಂಗವಲ್ಲದವರ ಮೂಲಕ ನಿಮ್ಮಲ್ಲಿ ಹುರುಡುಹುಟ್ಟಿಸುವೆನು;**
**ವಿವೇಕವಿಲ್ಲದ ಜನರ ಮೂಲಕ ನಿಮ್ಮನ್ನು ಸಿಟ್ಟಿಗೆಬ್ಬಿಸುವೆನು**
**20ಎಂದು ಮೊದಲು ಮೋಶೆಯು ಹೇಳುತ್ತಾನೆ. ಇದಲ್ಲದೆ ಯೆಶಾಯನು ಧೈರ್ಯವಾಗಿ ಮಾತಾಡಿ—**
**ನನ್ನನ್ನು ಹುಡುಕದವರಿಗೂ ಸಿಕ್ಕಿದೆನು,**
**ನನ್ನ ವಿಷಯ ವಿಚಾರಮಾಡದವರಿಗೂ ಪ್ರತ್ಯಕ್ಷನಾದೆನು**
**21ಎಂದು ಹೇಳುತ್ತಾನೆ. ಆದರೆ ಅವನು ಇಸ್ರಾಯೇಲ್ಯರನ್ನು ಕುರಿತು—ನನ್ನ ಮಾತಿಗೆ ಅವಿಧೇಯರಾಗಿ ಎದುರುಮಾತಾಡುವ ಜನರನ್ನು ನಾನು ದಿನವೆಲ್ಲಾ ಕೈಚಾಚಿ ಕರೆದೆನೆಂದು ಹೇಳುತ್ತಾನೆ.**

**ವಚನ 18.** ದೇವರು ಅವರನ್ನು ತಿರಸ್ಕರಿಸಿದ್ದಕ್ಕೆ ಅವರದ್ದೇ ತಪ್ಪು ಕಾರಣವಾಗಿತ್ತೆಂಬುದನ್ನು ಒಪ್ಪಿಕೊಳ್ಳುವದು ಯೆಹೂದ್ಯರಿಗೆ ಕಷ್ಟಕರವೆಂದು ಪೌಲನಿಗೆ ಗೊತ್ತಿತ್ತು. ಆದುದರಿಂದ, ಆತನು ಕೆಲವರು ಎತ್ತಬಹುದಾದ ಆಕ್ಷೇಪಣೆಗಳನ್ನು

ಮುಂದಿಡುತ್ತಾನೆ. ಮೊದಲ ಆಕ್ಷೇಪಣೆಯೇನೆಂದರೆ ಬಹುಶಃ ಯೆಹೂದ್ಯರಿಗೆ ಕೇಳಿಸಿಕೊಳ್ಳುವದಕ್ಕೆ ಅವಕಾಶವೇ ಸಿಕ್ಕಲಿಲ್ಲವೆನೋ ಎಂಬುದು: **ಆದರೂ ಅವರು ಕಿವಿಗೆ ಬೀಳಲಿಲ್ಲವೇನು ಎಂದು ಕೇಳುತ್ತೇನೆ.** ಪೌಲನು ಪ್ರತ್ಯುತ್ತರ ನೀಡಿ **ಬಿದ್ದದ್ದು ನಿಶ್ಚಯ** ಎನ್ನುತ್ತಾನೆ, ಮತ್ತು ಬಳಿಕ ಇನ್ನೊಂದು ವಾಕ್ಯಭಾಗವನ್ನು ಉಲ್ಲೇಖಿಸುತ್ತಾನೆ: **ಸಾರುವವರು ಧ್ವನಿಯು ಭೂಮಿಯಲ್ಲೆಲ್ಲಾ ಪ್ರಸರಿಸಿತು, ಅವರ ನುಡಿಗಳು ಲೋಕದ ಕಟ್ಟಕಡೆಯ ವರೆಗೂ ವ್ಯಾಪಿಸಿದವು.** ಈ ಉಲ್ಲೇಖನವು ಕೀರ್ತನೆ 19:4 ರಿಂದ ತೆಗೆದುಕೊಳ್ಳಲ್ಪಟ್ಟಿದೆ. ಇಲ್ಲಿ ಸನ್ನಿವೇಶವು ಸೂರ್ಯ, ಚಂದ್ರ, ಮತ್ತು ನಕ್ಷತ್ರಗಳ ವಿಶ್ವವ್ಯಾಪಿ ಸಾಕ್ಷಿಯನ್ನು ಸೂಚಿಸುತ್ತದೆ. ಪೌಲನು ಕೀರ್ತನೆ 19ರ ಪರಿಭಾಷೆಯನ್ನು ತನ್ನದಾಗಿಸಿಕೊಂಡು ಸುವಾರ್ತೆಯ ಸಾರುವಿಕೆಯು ಆಕಾಶದ ನಕ್ಷತ್ರಗಳಷ್ಟು ವ್ಯಾಪಕವಾಗಿ ಪ್ರಸರಿಸಿದೆ ಎಂದು ಘೋಷಿಸುತ್ತಾನೆ.

"ಭೂಮಿಯಲ್ಲೆಲ್ಲಾ" ಮತ್ತು "ಲೋಕದ ಕಟ್ಟಕಡೆಯ ವರೆಗೂ" ಎಬ ಪದಗುಚ್ಛಗಳು ಪೌಲನು ರೋಮಾಪುರದವರಿಗೆ ಪತ್ರಿಕೆಯನ್ನು ಬರೆಯುವ ಹೊತ್ತಿಗೆ ಸಾಧ್ಯವಾದ ಎಲ್ಲಾ ಸ್ಥಳಗಳಿಗೂ ತಲುಪಿತ್ತು ಎಂಬರ್ಥವನ್ನು ಕೊಡುವದಿಲ್ಲ. ಪತ್ರಿಕೆಯ ನಂತರದ ಭಾಗದಲ್ಲಿ, ಪೌಲನು "ಕ್ರಿಸ್ತನ ಹೆಸರು" ತಿಳಿಸಲ್ಪಟ್ಟಂತೆ ತೋರದ (15:20) ಸ್ಪೇನ್ ದೇಶಕ್ಕೆ ಹೋಗಬೇಕೆಂಬ ತನ್ನ ಬಯಕೆಯ ಕುರಿತು ಮಾತಾಡಿದನು (15:28). 10:18ರಲ್ಲಿನ ಪರಿಭಾಷೆಯ ಉದ್ದೇಶವು *ಯೆಹೂದ್ಯರಿಗೆ* ಸುವಾರ್ತೆಯನ್ನು ಕೇಳುವ ಅವಕಾಶವು ಒದಗಿಸಲ್ಪಟ್ಟಿತ್ತೆಂಬುದನ್ನು ಸಾಭಿತುಪಡಿಸುವದೇ ಆಗಿತ್ತು. ಆ ಸಮಯದಲ್ಲಿ, ಬಹುಪಾಲು ಯೆಹೂದ್ಯರು ಮೆಡಿಟರೇನಿಯನ್ ಸಮುದ್ರದ ಸುತ್ತ ವಾಸಿಸುತ್ತಿದ್ದರು, ಮತ್ತು ಬಹಳಷ್ಟು ಕ್ಷೇತ್ರದಲ್ಲಿ ಸ್ವತಃ ಪೌಲನಿಂದ ಸುವಾರ್ತೆ ಸಾರಲ್ಪಟ್ಟಿತ್ತು.

**ವಚನ 19.** ಪೌಲನು ಎದುರುನೋಡಿದ ಎರಡನೆಯ ಆಕ್ಷೇಪಣೆ ಯಾವದೆಂದರೆ, ಯೆಹೂದ್ಯರು ಕೇಳಿಸಿಕೊಂಡಿದ್ದರಾದರೂ, ಏನು ನಡೆಯುತ್ತಿದೆಯೆಂಬುದನ್ನು ಅವರು ನಿಜವಾಗಿಯೂ *ತಿಳುಕೊಳ್ಳಲಿಲ್ಲ.* ಈ ಕಾರಣಕ್ಕೆ, ಮಾನವ ತರ್ಕದ ಪ್ರಕಾರ, ಅದಕ್ಕೆ ಅವರನ್ನು ಹೊಣೆಗಾರರನ್ನಾಗಿ ಮಾಡುವದಕ್ಕಾಗುವದಿಲ್ಲ: **ಆದರೆ ಇಸ್ರಾಯೇಲ್ಯರು ಆ ವಾರ್ತೆಯನ್ನು ತಿಳುಕೊಳ್ಳಲಿಲ್ಲವೇನು ಎಂದು ಕೇಳುತ್ತೇನೆ.** ಈ ಆಕ್ಷೇಪಣೆಗೆ ಪೌಲನ ಉತ್ತರವೇನೆಂದರೆ ಅವರು ತಿಳುಕೊಂಡು ಅರ್ಥಮಾಡಿಕೊಂಡಿರಬೇಕಿತ್ತು ಯಾಕೆಂದರೆ ನಡೆದಿದ್ದೆಲ್ಲವೂ ಶಾಸ್ತ್ರಗಳಲ್ಲಿ ಮುಂತಿಳಿಸಲ್ಪಟ್ಟಿತ್ತು: **ಈ ವಿಷಯದಲ್ಲಿ—ಜನಾಂಗವಲ್ಲದವರ ಮೂಲಕ ನಿಮ್ಮಲ್ಲಿ ಹುರುಡುಹುಟ್ಟಿಸುವೆನು; ವಿವೇಕವಿಲ್ಲದ ಜನರ ಮೂಲಕ ನಿಮ್ಮನ್ನು ಸಿಟ್ಟಿಗೆಬ್ಬಿಸುವೆನು ಎಂದು ಮೊದಲು ಮೋಶೆಯು ಹೇಳುತ್ತಾನೆ.** ಈ ಉಲ್ಲೇಖನವು ಧರ್ಮೋಪದೇಶಕಾಂಡ 32:21 ರಿಂದ ತೆಗೆದುಕೊಳ್ಳಲ್ಪಟ್ಟಿದೆ. ಇದು ಮೋಶೆಯು ಇಸ್ರಾಯೇಲ್ಯರ ಮೇಲೆ ಕೃತಘ್ನತೆ ಮತ್ತು ಅವಿಧೇಯತೆಯುಳ್ಳವರೆಂದು ದೋಷರೋಪ ಮಾಡುವದರ ಭಾಗವಾಗಿರುತ್ತದೆ. ಇಸ್ರಾಯೇಲ್‌ನ್ನು ದಂಡಿಸುವದಕ್ಕೆ ದೇವರು ಹೊರಗಿನ ಜನಾಂಗದವರನ್ನು ಉಪಯೋಗಿಸುವನೆಂದು ಮೋಶೆಯು ಮುಂತಿಳಿಸುತ್ತಿದ್ದಾನೆ. "ಜನಾಂಗವಲ್ಲದವರ" ಎಂಬ ಪದಗುಚ್ಛದಲ್ಲಿ, ಪೌಲನು ಹೋಶೇಯ 1:10 ರಲ್ಲಿರುವ ಭಾವನೆಯ ರೀತಿಯ ಒಂದು ಭಾವನೆಯನ್ನು ಕಂಡನು. ರೋಮಾ 10:19 ರಲ್ಲಿ "ಜನಾಂಗವಲ್ಲದವರು" ಎಂದು ಸೂಚಿಸಲ್ಪಟ್ಟವರು 9:26 ರಲ್ಲಿನ ಅದೇ "ನನ್ನ ಜನರಲ್ಲ"

ಎಂಬುವವರೇ ಆಗಿದ್ದಾರೆ—ಬೇರೆ ಮಾತುಗಳಲ್ಲಿ ಹೇಳುವದಾದರೆ, ಅನ್ಯಜನರು. ಯೆಹೂದ್ಯರಿಗೆ ದೃಷ್ಟಿಯಲ್ಲಾದರೋ, ಅನ್ಯಜನರು "ತಿಳುವಳಿಕೆಯಿಲ್ಲದವರು" ಆಗಿದ್ದರು (2:19, 20ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಮುಂದಿನ ಅಧ್ಯಾಯದಲ್ಲಿ, ದೇವರು ಹೇಗೆ ಅನ್ಯಜನರನ್ನು ಅಂಗೀಕರಿಸಿಕೊಳ್ಳುವ ಮೂಲಕ ವಿಧೇಯರಾಗುವಂತೆ ಯೆಹೂದ್ಯರನ್ನು ಸ್ಫೂರ್ತಿಗೊಳಿಸುವ ಯೋಜನೆ ಮಾಡಿದನೆಂಬುದನ್ನು ಪೌಲನು ವಿಸ್ತಾರವಾಗಿ ತಿಳಿಸುತ್ತಾನೆ (11:11, 13, 14). ಇಲ್ಲಿ, ಆತನು ಹೇಳುತ್ತಿರುವದಿಷ್ಟೆ ಏನೆಂದರೆ ದೇವರು ಅನ್ಯಜನರನ್ನು ಅಂಗೀಕರಿಸಿಕೊಂಡಿದ್ದು ಯೆಹೂದ್ಯರಿಗೆ ದಿಗ್ಭ್ರಮೆಯುಂಟು ಮಾಡಬಾರದು ಯಾಕೆಂದರೆ ಮೋಶೆಯು ಅದನ್ನು ಮುಂತಿಳಿಸಿದ್ದನು ಎಂಬುದೆ. "ತಿಳುವಳಿಕೆಯಿಲ್ಲದವರು" ಎಂಬ ಪದಗುಚ್ಛದಲ್ಲಿ ಒಂದು ಸೂಚ್ಯಾರ್ಥವು ಸಹ ಇರಬಹುದಾಗಿದೆ: "ತಿಳುವಳಿಕೆಯಿಲ್ಲದವರು" ಎಂದು ಹೇಳಲ್ಪಟ್ಟ ಅನ್ಯಜನರು ದೇವರ ಯೋಜನೆಯನ್ನು ಅರ್ಥಮಾಡಿಕೊಳ್ಳಲು ಶಕ್ತರಾಗಿದ್ದರೆ, ಯೆಹೂದ್ಯರು—ದೇವರ ವಾರಸುದಾರಿಕೆಯಿಂದ ಆಶೀರ್ವದಿಸಲ್ಪಟ್ಟವರಾದವರು—ಅದನ್ನು ಅರ್ಥಮಾಡಿಕೊಂಡಿ*ರಬೇಕಾಗಿತ್ತು*. ಅವರು ಉತ್ತರವಿಲ್ಲದವರಾಗಿದ್ದರು.

**ವಚನ 20.** ನಂತರ ಪೌಲನು ಪುನಃ ಹಳೇ ಒಡಂಬಡಿಕೆಯಿಂದ ಉಲ್ಲೇಖಿಸುತ್ತಾನೆ: **ಇದಲ್ಲದೆ ಯೆಶಾಯನು ಧೈರ್ಯವಾಗಿ ಮಾತಾಡಿ** [ಕರ್ತನಿಗೋಸ್ಕರ ಮಾತಾಡುವವನಾಗಿ]—**ನನ್ನನ್ನು ಹುಡುಕದವರಿಗೂ ಸಿಕ್ಕಿದೆನು, ನನ್ನ ವಿಷಯ ವಿಚಾರಮಾಡದವರಿಗೂ ಪ್ರತ್ಯಕ್ಷನಾದೆನು ಎಂದು ಹೇಳುತ್ತಾನೆ. ಈ ಉಲ್ಲೇಖನವು ಯೆಶಾಯ 65:1 ರಿಂದ ತೆಗೆದುಕೊಳ್ಳಲ್ಪಟ್ಟಿದೆ.** ಮೂಲ ಸನ್ನಿವೇಶದಲ್ಲಿ, ಈ ಮತುಗಳು ಬಹುಶಃ ಅವಿಧೇಯರಾದ ಇಸ್ರಾಯೇಲ್ಯರನ್ನು ಸೂಚಿಸಿರಬಹುದು; ಆದರೆ ಪೌಲನು ಅವರಲ್ಲಿ ಅನ್ಯಜನರಿಗೆ ಅನ್ವಯವಾಗುವಂಥ ಒಂದು ಸಾಮಾನ್ಯ ಸೂತ್ರವನ್ನು ಕಾಣುತ್ತಾನೆ. ಪೌಲನು 9:30ರಲ್ಲಿ ಕಲಿಸಲ್ಪಟ್ಟ ಸತ್ಯವನ್ನು ಪುನರುಚ್ಚರಿಸುತ್ತಿದ್ದಾನೆ: "ನೀತಿಯನ್ನು ಹೊಂದುವದಕ್ಕೆ ಪ್ರಯತ್ನಮಾಡದ" ಅಥವಾ ದೇವರನ್ನು "ಹುಡುಕದವರು" ಎರಡನ್ನೂ ಕಂಡುಕೊಂಡರು ಯಾಕೆಂದರೆ ಅವರು ತಮ್ಮ ಹೃದಯಗಳನ್ನು ಸ್ಪರ್ಶಿಸುವಂತೆ ಸುವಾರ್ತೆಯ ಸಂದೇಶಕ್ಕೆ ಅನುಮತಿಸಿದರು.

**ವಚನ 21.** ಯೆಹೂದ್ಯರಿಗೆ ಸುವಾರ್ತೆಯನ್ನು ಕೇಳುವ ಅವಕಾಶವು ಸಿಕ್ಕಿದ್ದು ನಿಜವೇ ಆಗಿದ್ದರೆ, ಮತ್ತು ಅವರು ದೇವರ ಯೋಜನೆಯನ್ನು ಅರ್ಥಮಾಡಿಕೊಳ್ಳಬೇಕಾದದ್ದೇ ಆಗಿದ್ದಲ್ಲಿ, ಸಮಸ್ಯೆ ಏನಾಗಿತ್ತು? ಸರಳವಾಗಿ ಹೇಳುವದಾದರೆ, ಸಮಸ್ಯೆಯು ಏನಾಗಿತ್ತೆಂದರೆ, ಯೆಹೂದ್ಯರು ಮೊಂಡುತನವುಳ್ಳವರು, ಅವಿಧೇಯತೆಯ ಜನರು ಆಗಿದ್ದರು. ಪೌಲನು ಯೆಶಾಯನ ಪುಸ್ತಕದಿಂದ ಇನ್ನೊಂದು ಉಲ್ಲೇಖನವನ್ನು ಉಪಯೋಗಿಸುತ್ತಾನೆ: **ಆದರೆ ಅವನು ಇಸ್ರಾಯೇಲ್ಯರನ್ನು ಕುರಿತು—ನನ್ನ ಮಾತಿಗೆ ಅವಿಧೇಯರಾಗಿ ಎದುರುಮಾತಾಡು ಜನರನ್ನು ನಾನು ದಿನವೆಲ್ಲಾ ಕೈಚಾಚಿ ಕರೆದೆನೆಂದು ಹೇಳುತ್ತಾನೆ.** ಇದು ಯೆಶಾಯ 65:2ರಿಂದ ತೆಗೆದುಕೊಳ್ಳಲ್ಪಟ್ಟಿದೆ (ಈಗಷ್ಟೇ ಪೌಲನು ಉಲ್ಲೇಖಿಸಿದ ವಚನದ ನಂತರ ಬರುವಂಥದ್ದು). ಇಸ್ರಾಯೇಲ್ ಜನಾಂಗದ ಕಥೆಯು ಒಂದು ಅಪನಂಬಿಕೆ ಹಾಗೂ ಅವಿಧೇಯತೆಯ ಕಥೆಯಾಗಿರುತ್ತದೆ. ಇಸ್ರಾಯೇಲ್ಯರು ನಿರಂತರವಾಗಿ ದೇವರ ಹೃದಯವನ್ನು ಒಡೆದರು. ಅವರ ವಿಮೋಚನೆಯ ಕುರಿತಾದ ದೇವರ ಯೋಜನೆಯ

ವಿಷಯದಲ್ಲಿ ಅವರು ಗತಕಾಲದಲ್ಲಿದ್ದ ಹೇಗೆ ಇದ್ದರೋ, ಪೌಲನ ದಿನಗಳಲ್ಲೂ ಹಾಗೆಯೇ ಇದ್ದರು. NASB ಯು ಅವರನ್ನು "ಹಠಮಾರಿತನದವರು" ಎಂದು ಕರೆಯುತ್ತದೆ, ಅದರರ್ಥವು "ಮೊಂಡುತನವುಳ್ಳ" ಎಂದಾಗಿರುತ್ತದೆ. NLT ತರ್ಜುಮೆಯು, "ಅವರು ನನಗೆ ಅವಿಧೇಯರಾಗುತ್ತಲೇ ಇದ್ದರು ಮತ್ತು ನನ್ನೊಂದಿಗೆ ವಾದಿಸುತ್ತಲೇ ಇದ್ದರು" ಎಂದು ಹೇಳುತ್ತದೆ.

ಯೆಹೂದ್ಯರಿಗೆ ಏನಾದರೂ ನಿರೀಕ್ಷೆಯು ಇತ್ತೋ? ನಾವು ಯೆಶಾಯನ ಪುಸ್ತಕದ ಈ ಮಾತುಗಳನ್ನು ಉದಾಸೀನ ಮಾಡಬಾರದು: "ನಾನು ದಿನವೆಲ್ಲಾ ಕೈಚಾಚಿ ಕರೆದೆನು." ದೇವರು ತನ್ನ ಅವಿಧೇಯರಾದ ಮಕ್ಕಳನ್ನು ಪುನಃ ಸ್ವಾಗತಿಸುವದಕ್ಕೆ ಕೈಗಳನ್ನು ಚಾಚಿರುವ ದೀರ್ಘಶಾಂತಿಯುಳ್ಳ, ಪ್ರೀತಿಯುಳ್ಳ ಪೋಷಕನಂತೆ ಚಿತ್ರಿಸಲ್ಪಟ್ಟಿದ್ದಾನೆ. ಯೆಹೂದ್ಯರು ದೇವರ ಬಳಿಗೆ ಹಿಂದಿರುಗಿ ಆತನ ಯೋಜನೆಯನ್ನು ಅಂಗೀಕರಿಸುವದಾದಲ್ಲಿ, ಆತನು ಅವರನ್ನು ತನ್ನ ಪ್ರೀತಿಯ ಬಾಹುಗಳಿಂದ ಸುತ್ತಿ ಅಪ್ಪಿಕೊಳ್ಳುವವನಾಗಿದ್ದನು. ಈ ವಿಚಾರವನ್ನು ಇನ್ನಷ್ಟು ಹೆಚ್ಚಾಗಿ 11 ನೇ ಅಧ್ಯಾಯದಲ್ಲಿ ಚರ್ಚಿಸಲಾಗುವದು.

## ಅನ್ವಯಿಸುವಿಕೆ

### ಮಹಾ ಆಮಂತ್ರಣ (ಅಧ್ಯಾಯ 10)

ನೀವು ಕಾಲದಿಂದ ಕಾಲಕ್ಕೆ ಕ್ರಿಸ್ತನ ಕುರಿತು ಕಲಿಯುತ್ತಿರುವ ಹಾಗೆ, ನೀವು ಈ ರೀತಿಯಲ್ಲಿ ಯೋಚಿಸುವವರಾಗಿರಬಹುದು, "ಕ್ರಿಸ್ತನು ಖಂಡಿತವಾಗಿಯೂ ಒಬ್ಬ ಅದ್ಭುತನಾದ ವ್ಯಕ್ತಿಯಾಗಿದ್ದಾನೆ, ಮತ್ತು ಆತನು ದೇವಕುಮಾರನೇ ಆಗಿರಬೇಕು, ಆದರೆ ಆತನು ನಿಜಕ್ಕೂ ನನಗೋಸ್ಕರ ಚಿಂತಿಸುತ್ತಾನೆಂಬುದನ್ನು ನಂಬುವದಕ್ಕೆ ಕಷ್ಟಕರವಾಗಿರುತ್ತದೆ. ಅಂತೂ, ನಾನು ಬಹಳ ಬಲಹೀನನೂ ಪಾಪಿಯೂ ಆಗಿದ್ದೇನಷ್ಟೇ." ನಾನು ನಿಮಗೆ ಹೇಳುತ್ತೇನೆ ಏನೆಂದರೆ ಕ್ರಿಸ್ತನು *ನಿಜಕ್ಕೂ* ನಿಮಗೋಸ್ಕರ ಚಿಂತಿಸುತ್ತಾನೆ—ಆತನು ನಿಮ್ಮನ್ನು ಪ್ರೀತಿಸುತ್ತಾನೆ ಮತ್ತು ವಾಸ್ತವಾಂಶವೇನೆಂದರೆ ಆತನು "*ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರ* ಈ ಲೋಕಕ್ಕೆ ಬಂದನು" ಎಂಬುದೆ (1 ತಿಮೊಥೆ 1:15; ಒತ್ತಿ ಹೇಳಿದ್ದು ನನ್ನದು).

ಕ್ರಿಸ್ತನು ಪ್ರತಿಯೊಬ್ಬರ ಮೇಲೆ ಇಟ್ಟಿರುವ ಆಶ್ಚರ್ಯವಾದ ಪ್ರೀತಿಯು ಮತ್ತಾಯ 11:28–30ರಲ್ಲಿ ಆತನು ನೀಡುವ ಮಹಾ ಆಮಂತ್ರಣದಲ್ಲಿ ತೋರ್ಪಡುತ್ತದೆ. ಆತನು ಅಗಲವಾಗಿ ಕೈಗಳನ್ನು ಚಾಚಿದವನಾಗಿ, ಹೀಗೆ ಹೇಳುತ್ತಾನೆ,

> ಎಲೈ ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಕೊಡುವೆನು. ನಾನು ಸಾತ್ವಿಕನೂ ದೀನ ಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು. ಯಾಕೆಂದರೆ ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು.

*ಒಂದು ಆಮಂತ್ರಣ.* ಈ ಪ್ರೇರಕವಾದ ಮಾತುಗಳಲ್ಲಿನ ಅರ್ಥವನ್ನು ಕೆಲವು ನಿಮಿಷ

ಯೋಚಿಸಿರಿ. ಈ ವಾಕ್ಯಭಾಗದಲ್ಲಿ ಮೊಟ್ಟಮೊದಲಾಗಿ ನಾವು ಒಂದು ಆಮಂತ್ರಣವನ್ನು ಕಾಣುತ್ತೇವೆ.

ವಾಕ್ಯಭಾಗವು "ಬನ್ನಿರಿ" ಎಂದು ಆರಂಭವಾಗುತ್ತದೆ. ಬರಬೇಕಾದವನು ಮನುಷ್ಯನೇ ಆಗಿರುತ್ತಾನೆ. ಆತನನ್ನು ಅಂಗೀಕರಿಸಿಕೊಳ್ಳುತ್ತೇವೋ ಅಥವಾ ಇಲ್ಲವೋ ಎಂಬುದನ್ನು ನಿರ್ಧರಿಸಬೇಕಾದವರು ನಾವೇ ಆಗಿರುತ್ತೇವೆ. ದೇವರು ನಮ್ಮನ್ನು ಒತ್ತಾಯ ಪಡಿಸುವದಿಲ್ಲ.

ಬಳಿಕ, ಆತನು ಹೀಗೆ ಹೇಳುತ್ತಾನೆ, "*ನನ್ನ* ಬಳಿಗೆ ಬನ್ನಿರಿ." ಸೆಳೆಯುವ ಶಕ್ತಿಯು ಇಲ್ಲಿಯೇ ಇದೆ. ಯೇಸು ಹೀಗೆ ಹೇಳುತ್ತಾನೆ, "ಆದರೆ ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು" (ಯೋಹಾನ 12:32). ಕ್ರಿಸ್ತನು ಜನರನ್ನು ತನ್ನ ಬಳಿಗೆ ಎಳಕೊಂಡಿದ್ದಾನೆ ಮತ್ತು ಎಳಕೊಳ್ಳು*ತ್ತಿದ್ದಾನೆ*.

ಆತನು ಯಾವ ವಿಧವಾದ ಜನರನ್ನು ಎಳಕೊಳ್ಳುತ್ತಿದ್ದಾನೆ? ಆಮಂತ್ರಣವು ಮುಂದುವರೆಯುತ್ತದೆ: "ಕಷ್ಟಪಡುವವರೇ, ಹೊರೆಹೊತ್ತವರೇ." ಯಾರೊಬ್ಬರೂ ಕೈಬಿಡಲ್ಪಟ್ಟಿರುವದಿಲ್ಲ. ಯೇಸು ಎಲ್ಲರನ್ನೂ ಕರೆಯುತ್ತಾನೆ. ಆತನಿಗೆ "ಕಷ್ಟಪಡುವವರು, ಹೊರೆಹೊತ್ತವರು" ಬೇಕು—ಪಾಪ, ಕಷ್ಟ, ಚಿಂತೆ, ಮತ್ತು ಕಳವಗಳ ಭಾರದಡಿಯಲ್ಲಿ ಒದ್ದಾಡುತ್ತಿರುವವರು. ಈ ಪುರುಷ ಮತ್ತು ಈ ಸ್ತ್ರೀಗೆ ಯೇಸು ಹೇಳುತ್ತಾನೆ, "ನನ್ನ ಬಳಿಗೆ ಬನ್ನಿರಿ."

ಬರುವಂಥ ಮನುಷ್ಯನಿಗೆ ಸಿಕ್ಕುವ ವಾಗ್ದಾನವು ಯಾವುದು? "ನಾನು ನಿಮಗೆ ವಿಶ್ರಾಂತಿಕೊಡುವೆನು." ತಾನು ಸಹಿಸುವದಕ್ಕಿಂತಲೂ ಅಧಿಕವಾದ ಭಾರದ ಅಡಿಯಲ್ಲಿ ತೊಳಲಾಡುತ್ತಿರುವವನಿಗೆ, ಯೇಸು ಹೇಳುತ್ತಾನೆ, "ನಾನು ನಿಮಗೆ *ವಿಶ್ರಾಂತಿ*ಕೊಡುವೆನು." ಯೇಸು ನಿಮ್ಮ ಬೆನ್ನಿನ ಮೇಲಿಂದ ಆ ಘೋರ ಭಾರವನ್ನು ತೆಗೆದುಬಿಟ್ಟು ಅದನ್ನು ತನ್ನ ಮೇಲೆ ಹೊತ್ತುಕೊಳ್ಳುವದಕ್ಕೆ ಬಯಸುತ್ತಾನೆ. ಆತನು ನಿಮ್ಮ ಸಮಸ್ಯೆಗಳನ್ನು ತೆಗೆದುಕೊಂಡು ಅವುಗಳನ್ನು ತನ್ನವುಗಳನ್ನಾಗಿ ಮಾಡಿಕೊಳ್ಳಲು ಬಯಸುತ್ತಾನೆ. ಆತನು ನಿಮ್ಮ ಹೃದಯದ ನೋವನ್ನು ಮತ್ತು ಸಂಕಷ್ಟಗಳನ್ನು ತೆಗೆದುಕೊಂಡು ಅವುಗಳನ್ನು ಶಾಶ್ವತವಾಗಿ ಹೊರಗಟ್ಟುವದಕ್ಕೆ ಬಯಸುತ್ತಾನೆ.

ಹೌದು, ಕ್ರಿಸ್ತನು ನಿಮಗೆ *ವಿಶ್ರಾಂತಿ*ಯನ್ನು ಕೊಡುವದಕ್ಕೆ ಇಚ್ಛಿಸುತ್ತಾನೆ. ಆತನು ನಿಮಗೆ ಪಾಪದ ಭಾರದಿಂದ ವಿಶ್ರಾಂತಿಯನ್ನು ಒದಗಿಸುತ್ತಾನೆ; ಆತನು ನಿಮ್ಮ ಪ್ರಾಣವನ್ನು ಶುದ್ಧಗೊಳಿಸಿ ಅದನ್ನು ಹಿಮದಂತೆ ಬೆಳ್ಳಗೆ ಮಾಡಬಲ್ಲನು. ಅಲ್ಲದೆ ಆತನು ನಿಮಗೆ ಚಿಂತೆಯಿಂದ ವಿಶ್ರಾಂತಿ ಒದಗಿಸುತ್ತಾನೆ; ಆತನು ಸದಾಕಾಲವೂ ತನ್ನ ನಂಬಿಗಸ್ತ ಮಕ್ಕಳಿಗೋಸ್ಕರ ಬೇಡುವವನಾಗಿ ದೇವರ ಬಲಗಡೆಯಲ್ಲಿರುತ್ತಾನೆ ಮತ್ತು ದೇವರ ಮುಂದೆ ಅವರ ವಿಜ್ಞಾಪನೆಗಳನ್ನು ಇಡುವವನಾಗಿದ್ದಾನೆ.

*ಒಂದು ಜವಾಬ್ದಾರಿಕೆ.* ಈ ಆಮಂತ್ರಣದಲ್ಲಿ ಒಂದು ಜವಾಬ್ದಾರಿಯು ಸಹ ಅಡಕವಾಗಿರುತ್ತದೆಂಬುದನ್ನು ಈಗ ಗಮನಿಸಿರಿ. ಈ ಆಶೀರ್ವಾದಗಳು ಮತ್ತು ವಾಗ್ದಾನಗಳು ಅವುಗಳನ್ನು ಹುಡುಕದವರಿಗಾಗಿ ಮತ್ತು ದೇವರಿಗೆ ವಿಧೇಯನಾಗದವನಿಗಾಗಿ ಇರುವದಿಲ್ಲ. ಯೇಸು ಹೇಳುತ್ತಾನೆ, "ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು" ಎಂಬದಾಗಿ. ನಾವು ನಮ್ಮನ್ನು ದೇವರಿಗೆ ಕೊಡುವದಕ್ಕೆ ಮನಸ್ಸುಳ್ಳವರಾಗಿರತಕ್ಕದ್ದು. ಯೇಸು ಹೀಗೆ ಹೇಳಿದನು, "ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಕೊಂಡು

ನಡೆಯುವಿರಿ" (ಯೋಹಾನ 14:15).

ಪುನಃ, ಪ್ರೇರಿತ ಬರಹವು ಹೀಗೆ ಹೇಳುತ್ತದೆ: "ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. ಹೀಗೆ ಆತನು ಸಿದ್ಧಿಗೆ ಬಂದು . . . *ತನಗೆ ವಿಧೇಯರಾಗುವವರೆಲ್ಲರಿಗೂ* ನಿರಂತರವಾದ ರಕ್ಷಣೆಗೆ ಕಾರಣನಾದನು" (ಇಬ್ರಿಯ 5:8, 9; ಒತ್ತಿ ಹೇಳಿದ್ದು ನನ್ನದು).

ಈ ಮಹಾ ಆಮಂತ್ರಣವನ್ನು ಸ್ವೀಕರಿಸಿಕೊಳ್ಳುವದಕ್ಕಿರುವ ಏಕೈಕ ದಾರಿಯೆಂದರೆ ದೇವರ ಚಿತ್ತಕ್ಕೆ ಸಂಪೂರ್ಣವಾಗಿ ಶರಣಾಗತರಾಗುವ ಮೂಲಕವೇ ಆಗಿದೆ. ನಾವು ನಂಬಿಗಸ್ತಿಕೆಯಿಂದ ವಿಧೇಯರಾಗುವ ಮೂಲಕ ನಮ್ಮ ಪ್ರೀತಿಯನ್ನು ತೋರ್ಪಡಿಸತಕ್ಕದ್ದು.

ನಮ್ಮ ವಾಕ್ಯವು ಮುಂದುವರೆದು, "ನನ್ನಲ್ಲಿ ಕಲಿತುಕೊಳ್ಳಿರಿ" ಎಂದು ಹೇಳುತ್ತದೆ. ನಾವು ಆತನ ಪ್ರೀತಿ, ದೀನತೆ (ಆತನು "ಸಾತ್ವಿಕನೂ ದೀನ ಮನಸ್ಸುಳ್ಳವನೂ" ಆಗಿದ್ದಾನೆ), ಆತನ ಒಳ್ಳೇಯತನ, ದೇವತ್ವದ ಬಗ್ಗೆ ಕಲಿತುಕೊಳ್ಳಬೇಕು, ಮತ್ತು, ಹೌದು, ಆತನ *ಅಧಿಕಾರ*ದ ಬಗ್ಗೆ ಕಲಿತುಕೊಳ್ಳಬೇಕು. ಯೇಸು "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ *ಎಲ್ಲಾ ಅಧಿಕಾರವು* ನನಗೆ ಕೊಡಲ್ಪಟ್ಟಿದೆ" ಎಂದು ಘೋಷಿಸಿದನು (ಮತ್ತಾಯ 28:18; ಒತ್ತಿ ಹೇಳಿದ್ದು ನನ್ನದು).

ಯೇಸುವಿಗೆ ಆಮಂತ್ರಣವನ್ನು ಕೊಡುವ ಅಧಿಕಾರವು ಇದ್ದದ್ದಾದರೆ, *ಹೇಗೆ* ಬರಬೇಕೆಂದು ಮನುಷ್ಯರಿಗೆ ಹೇಳುವ ಅಧಿಕಾರವು ಸಹ ಖಂಡಿತವಾಗಿಯೂ ಆತನಿಗಿರುತ್ತದೆ. ಒಬ್ಬ ವ್ಯಕ್ತಿಯು "ನನಗೆ ಯೇಸು ಹೀಗೆಂದು ಮತ್ತು ಹಾಗೆಂದು ಹೇಳಿದ್ದಾನೆಂದು ಗೊತ್ತಿದೆ, ಆದರೆ ಅದು ಅವಶ್ಯಕವೆಂದು ನನಗನ್ನಿಸುವದಿಲ್ಲ" ಎಂದು ಹೇಳುವವನಾಗಿದ್ದರೆ, ಆತನು ಎಂದಿಗೂ ಕ್ರಿಸ್ತನ ನೊಗವನ್ನು ತನ್ನ ಮೇಲೆ ತೆಗೆದುಕೊಂಡವನಲ್ಲ ಮತ್ತು ಎಂದಿಗೂ ಆತನ ಆಶೀರ್ವಾದಗಳನ್ನು ಸ್ವೀಕರಿಸಿಕೊಳ್ಳುವದಕ್ಕೆ ಸಾಧ್ಯವಿಲ್ಲ.

ಯೇಸು ತನ್ನ ಅಧಿಕಾರವನ್ನು ಪ್ರತಿಪಾದಿಸಿದ ಬಳಿಕ ಹೀಗೆ ಹೇಳುತ್ತಾನೆ, "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ 16:16). ಈಗಾಗಲೇ ನೊಗವನ್ನು ಹೊತ್ತುಕೊಂಡಿರುವವರಿಗೆ, ಆತನು "ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು" (ಪ್ರಕಟನೆ 2:10).

ಅದು ಯೋಗ್ಯವಾದದ್ದೋ? ಆತನು ತನ್ನ ವಾಗ್ದಾನವನ್ನು ಪುನರುಚ್ಛರಿಸುವದನ್ನು ಈಗ ಕೇಳಿಸಿಕೊಳ್ಳಿರಿ: "ಆಗ ನಿಮ್ಮ ಆತ್ಮಗಳಿಗೆ *ವಿಶ್ರಾಂತಿ ಸಿಕ್ಕುವದು.*" ವಿಶ್ರಾಂತಿಯನ್ನೇ ಕಂಡುಕೊಳ್ಳದಂಥ ಈ ಲೋಕದಲ್ಲಿ, ನೀವು ನಿಮ್ಮೊಳಗಡೆಯೇ ವಿಶ್ರಾಂತಿಯನ್ನು ಕಂಡುಕೊಳ್ಳಬಹುದಾಗಿದೆ—ಅದು ಚಂಚಲವಾದ ಭಾವಗಳು ಅಥವಾ ವ್ಯರ್ಥವಾದ ಕಲ್ಪನೆಗಳ ಮೇಲೆ ಆಧಾರವಾದಂಥ ವಿಶ್ರಾಂತಿಯಲ್ಲ, ಆದರೆ ದೇವರ ವಾಕ್ಯವೆಂಬ ತಳಬಂಡೆಯ ಅಸ್ತಿವಾರದ ಮೇಲೆ ಆಧಾರವಾಗಿರುತ್ತದೆ. ನೀವು "ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿ" ಯನ್ನು ತಿಳಿಯಬಹುದು (ಫಿಲಿಪ್ಪಿ 4:7) ಮತ್ತು "ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ" ಎಂಬುದನ್ನು ತಿಳಿದುಕೊಳ್ಳಬಲ್ಲಿರಿ (8:28)—ನೀವು ಆತನಿಗೆ *ವಿಧೇಯ*ರಾಗುವದಾದರೆ ಮಾತ್ರವೇ.

"ಆದರೆ ಇದೊಂದು ದೊಡ್ಡ ಜವಾಬ್ದಾರಿಯಲ್ಲವೇ? ಕರ್ತನು ಅಧಿಕವಾದದ್ದನ್ನು ನಮ್ಮಿಂದ ನಿರೀಕ್ಷಿಸುತ್ತಿಲ್ಲವೋ?" ಎಂದು ನೀವು ಕೇಳುವಿರಿ. ರಕ್ಷಕನು ಮುಕ್ತಾಯದಲ್ಲಿ ಹೀಗೆ ಹೇಳುವದನ್ನು ಕೇಳಿಸಿಕೊಳ್ಳುತ್ತೇವೆ: "ಯಾಕೆಂದರೆ ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು." ಯೇಸು ನಮಗೋಸ್ಕರ ಮಾಡಿರುವ ಕಾರ್ಯಗಳಿಗೆ ಹೋಲಿಸುವದಾದರೆ, ನಾವು ಮಾಡಬೇಕೆಂದು ಯೇಸು ಹೇಳುವ ಕಾರ್ಯಗಳು ಬಹಳ ಚಿಕ್ಕವುಗಳೇ ಸರಿ. ದೇವರ ಆಜ್ಞೆಗಳ ವಿಷಯದಲ್ಲಿ ದಬ್ಬಾಳಿಕೆಯೆಂಬುದೇನೂ ಇಲ್ಲ. ಅವುಗಳು "ವಿವೇಕಪೂರ್ವಕವಾದ ಆರಾಧನೆಯು" ಎಂಬುದಾಗಿ ಪೌಲನು ಹೇಳುತ್ತಾನೆ (ರೋಮಾ 12:1; KJV).

ಎಲ್ಲಕ್ಕಿಂದ ಮೇಲಾಗಿ, ಆತನ ನೊಗವು ಸುಲಭವಾದದ್ದು ಯಾಕೆಂದರೆ ವಿಧೇಯವಾಗುವ ಪ್ರತಿಯೊಂದು ಆಜ್ಞೆಯಿಂದ ಹೊಸದಾದ ಸಂತೋಷ ಸಿಕ್ಕುತ್ತದೆ. ನಾವು ಕ್ರಿಸ್ತನ ಹೆಜ್ಜೆಯ ಜಾಡುಗಳಲ್ಲಿ ನಡೆಯುವವರಾಗಿ ನಮ್ಮನ್ನು ಇತರರ ಸಂತೋಷಕ್ಕೋಸ್ಕರ ಸಮರ್ಪಿಸಿಕೊಳ್ಳುವಾಗ, ಅನುದಿನವೂ ಹೆಚ್ಚೆಚ್ಚು ಪ್ರಕಾಶಮಾನವಾಗಿಯೂ ಸಂತೋಷಕರವಾಗಿಯೂ ಬೆಳೆಯುತ್ತಾ ಹೋಗುವದನ್ನು ಕಾಣುವೆವು.

*ಮುಕ್ತಾಯ.* ನೀವು ನಿಮ್ಮ ದೈನಂದಿನ ಕೆಲಸದಲ್ಲಿ ತೊಡಗಿಸಿಕೊಂಡ ಹಾಗೆ, ಈ "ಮಹಾ ಆಮಂತ್ರಣ" ವು ಆಗಾಗ ನಿಮ್ಮ ಹೃದಯಕ್ಕೆ ಹಿಂದಿರುಗುವಂತೆ ಅನುಮತಿಸಿರಿ:

> ಎಲೈ ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಕೊಡುವೆನು. ನಾನು ಸಾತ್ವಿಕನೂ ದೀನ ಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು. ಯಾಕೆಂದರೆ ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು ಅಂದನು.

ಅದು ದೊಡ್ಡ ಆಶೀರ್ವಾದಗಳು *ಮತ್ತು* ಒಂದು ಜವಾಬ್ದಾರಿಯನ್ನು ಹೊಂದಿರುವ ಒಂದು ಆಮಂತ್ರಣವನ್ನು ಒಳಗೊಂಡಿರುತ್ತದೆಂಬುದನ್ನು ನೆನಪಿಟ್ಟುಕೊಳ್ಳಿರಿ . . . ಮತ್ತು ಮೊದಲು ಜವಾಬ್ದಾರಿಗಳನ್ನು ನೆರವೇರಿಸುವ ಹೊರತು *ಆಶೀರ್ವಾದಗಳನ್ನು* ಅನುಭವಿಸುವದಕ್ಕೆ ಸಾಧ್ಯವಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ!

## ಜ್ಞಾನಾನುಸಾರವಲ್ಲದ ಆಸಕ್ತಿ (10:2)

ಇಂದು ಅನೇಕರು ದೇವರನ್ನು ಮೆಚ್ಚಿಸಬೇಕೆಂದರೆ ಧಾರ್ಮಿಕವಾದ ಆಸಕ್ತಿ (ವೈರಾಗ್ಯ) ಮಾತ್ರವೊಂದಿದ್ದರೆ ಸಾಕು ಎಂದು ನಂಬಿರುತ್ತಾರೆ. ಒಂದು ಜನಮೆಚ್ಚಿದ ನಂಬಿಕೆಯನ್ನು ಈ ರೀತಿಯಲ್ಲಿ ವ್ಯಕ್ತಪಡಿಸಬಹುದಾಗಿದೆ: "ಒಬ್ಬನು ಎಲ್ಲಿಯ ತನಕ ಪ್ರಾಮಾಣಿಕ ಮತ್ತು ಯಥಾರ್ಥನಾಗಿರುತ್ತಾನೋ, ಆತನು ಪರಲೋಕಕ್ಕೆ ಹೋಗುವನು." ರೋಮಾ 10:2 ಅದು ಸತ್ಯವಲ್ಲ ಎಂದು ಘೋಷಿಸುತ್ತದೆ. "ಯಥಾರ್ಥತೆಯು ಸಾಕಾಗುವದಿಲ್ಲ, ಯಾಕೆಂದರೆ ನಾವು ಯಥಾರ್ಥವಾಗಿ ತಪ್ಪಾಗಿರಬಹುದಾಗಿದೆ."[30]

ತಿಳುವಳಿಕೆಯಿಲ್ಲದ ಆಸಕ್ತಿ ಅಥವಾ ಶ್ರದ್ಧೆಯಿಂದಿರುವ ಅಪಾಯಕ್ಕೊಳಪಟ್ಟ ಸ್ಥಿತಿಯನ್ನು ಅನೇಕ ವಿಧಗಳಲ್ಲಿ ದೃಷ್ಟಾಂತಪಡಿಸಬಹುದು. ಕೆಲವು ಬರಹಗಾರರು ತಿಳುವಳಿಕೆಯನ್ನು

ಬೆಳಕಿಗೆ ಸಮಾನಗೊಳಿಸುತ್ತಾರೆ (ನೋಡಿರಿ ಕೀರ್ತನೆ 119:105). ಒಬ್ಬ ತಿಳುವಳಿಕೆಯಿಲ್ಲದ ಆಸಕ್ತಿಯುಳ್ಳ ಮನುಷ್ಯನು ಕತ್ತಲಲ್ಲಿ ತನಗೆ ಸಾಧ್ಯವಾದಷ್ಟು ವೇಗವಾಗಿ ಓಡುತ್ತಿರುವ ವ್ಯಕ್ತಿಗೆ ಹೋಲಿಕೆಯಾಗಿದ್ದಾನೆ, ತಾನು ಎಲ್ಲಿಗೆ ಹೋಗುತ್ತಿರುವನೋ ಅವನಿಗೇ ತಿಳಿಯದಾಗಿರುತ್ತದೆ. ನನ್ನ ನೆನಪಿಗೆ ಬರುವ ಅದೇ ರೀತಿಯ ಇನ್ನೊಂದು ದೃಷ್ಟಾಂತವೆಂದರೆ ಒಂದು ಸ್ವಯಂಚಾಲಿತ ಯಂತ್ರ, ಅದರಲ್ಲಿ ಯಂತ್ರವು ಆಸಕ್ತಿಗೆ ಮತ್ತು ತಿಳುವಳಿಕೆಯು ಚಾಲನಾ ಉಪಕರಣಕ್ಕೆ ಹೋಲಿಕೆಯಾಗಿರುತ್ತದೆ. ಅಲ್ಲದೆ ಒಂದು ಹಳೆಯ ಕಾರಿನಲ್ಲಿ ಒಬ್ಬನು ಮೈದಾನದಲ್ಲಿ ರಭಸವಾಗಿ ಅಪ್ಪಳಿಸುತ್ತಾ ಸಾಗುವ ಕಥೆಯೊಂದು ಸಹ ಇರುತ್ತದೆ. ಒಬ್ಬ ವ್ಯಕ್ತಿಯು ಚಾಲಕನನ್ನು, “ನಾವು ಎಲ್ಲಿಗೆ ಹೋಗುತ್ತಿದ್ದೇವೆ?” ಎಂದು ಕೇಳುತ್ತಾನೆ. ಅದಕ್ಕೆ ಚಾಲಕನು “ನನಗೆ ಗೊತ್ತಿಲ್ಲ, ಆದರೆ ನಾವು ಮಹತ್ತರವಾದ ಸಮಯವನ್ನು ಕಳೆಯುತ್ತಿದ್ದೇವೆ” ಎಂದು ಉತ್ತರಿಸಿದನು!

ನಾನು ನಿಯಂತ್ರಣವಿಲ್ಲದ ಆಸಕ್ತಿಯ ಬಗ್ಗೆ ಆಲೋಚಿಸುವಾಗ, ಒಂದು ನಿಯಂತ್ರಣವಿಲ್ಲದ ಬೆಂಕಿಯು ಎಷ್ಟೊಂದು ವಿನಾಶಕಾರಿ ಆಗಿರಬಲ್ಲದೆಂಬದನ್ನು ಚಿಂತಿಸುತ್ತೇನೆ. ನಾನು ಮೊದಲ ತರಗತಿಯಲ್ಲಿ ಓದುತ್ತಿರುವ ವೇಳೆ, ನಾನು ಯಾರಿಗೂ ಗೊತ್ತಾಗದಂತೆ ಕೆಲವು ಬೆಂಕಿಕಡ್ಡಿಗಳನ್ನು ಒಯ್ದೆನು ಮತ್ತು ನಮ್ಮ ಮನೆಯ ಹೊರಗಡೆಯಿರುವ ಹುಲ್ಲುಗಾವಲಿಗೆ ಆಕಸ್ಮಿಕವಾಗಿ ಬೆಂಕಿಯಿಟ್ಟು ಬಿಟ್ಟೆನು. ನನ್ನ ತಂದೆ ಮತ್ತು ಪಕ್ಕದ ರೈತರು ಬೆಂಕಿಯು ನಮ್ಮ ಮನೆ ಮತ್ತು ಆ ಪ್ರಾಂತ್ಯದಲ್ಲಿದ್ದ ಇತರ ಆಸ್ತಿಯನ್ನು ಸುಟ್ಟುಬಿಡದಂತೆ ಬೆಂಕಿಯನ್ನು ನಂದಿಸುವದಕ್ಕೆ ಹರಸಾಹಸ ಪಡುವದನ್ನು ನೋಡಿ ನಾನು ಎಷ್ಟೊಂದು ಚಿಂತೆಗೊಂಡಿದ್ದೆ ಎಂಬುದು ನನಗೆ ನೆನಪಿದೆ.

ಯೆಹೂದ್ಯರು ತಿಳುವಳಿಕೆಯಿಲ್ಲದ ಆಸಕ್ತಿಯನ್ನು ಹೊಂದಿದ್ದರ ಕಾರಣದಿಂದ ಸಮಸ್ಯೆಗೆ ಒಳಗಾಗಿದ್ದರು. ಆಸಕ್ತಿಯಿಲ್ಲದೆ ತಿಳುವಳಿಕೆಯನ್ನು ಹೊಂದಿರುವದು ಸಹ ಅಷ್ಟೇ ಕೆಟ್ಟದ್ದು ಎಂಬುದನ್ನು ನೀವು ಮತ್ತು ನಾನು ಅರ್ಥಮಾಡಿಕೊಳ್ಳಬೇಕಾಗಿರುತ್ತದೆ. ಅವುಗಳಲ್ಲಿ ಎರಡೂ ಸ್ಥಿತಿಗಳು ಸಹ ಕರ್ತನ ದೃಷ್ಟಿಯಲ್ಲಿ ಸ್ವೀಕಾರಯೋಗ್ಯವಾಗಿರುವದಿಲ್ಲ.

## ದೇವರ ಪರಿಪೂರ್ಣ ಯೋಜನೆ (10:14, 15)

ನೀವು ಎಂದಾದರೂ ಒಂದು ಯೋಜನೆಯನ್ನು ಮಾಡಿ–ಪರಿಪೂರ್ಣವೆಂದು ತೋರಿದಂಥ ಒಂದು ಯೋಜನೆ–ಆ ಬಳಿಕ ಆ ಯೋಜನೆಯನ್ನು ಕಾರ್ಯರೂಪಕ್ಕೆ ತರುವದಕ್ಕೆ ಸಾಧ್ಯವಾಗದ ಸ್ಥಿತಿಯನ್ನು ಎದುರಿಸಿರುವಿರೋ? ಬಹುಶಃ ಅಗತ್ಯವಾದ ಸಾಮಗ್ರಿಗಳನ್ನು ಶೇಖರಿಸಿಕೊಳ್ಳಲು ನಿಮಗೆ ಆಗದೆ ಹೋಗಿರಬಹುದು. ಬಹುಶಃ ನೀವು ಮತ್ತೊಬ್ಬರ ಸಹಾಯದ ಮೇಲೆ ಭರವಸೆಯಿಂದಿದ್ದಿರಬಹುದು, ಆದರೆ ಅವರು ತಮ್ಮ ಪಾತ್ರವನ್ನು ನೆರವೇರಿಸುವದಕ್ಕೆ ವಿಫಲರಾಗಿರಬಹುದು. ಬಹುಶಃ ನೀವು ಯೋಜನೆ ಮಾಡಿದ್ದ ಸಂಗತಿಯನ್ನು ಮಾಡುವದಕ್ಕೆ ನೀವು ಅಸಮರ್ಥರೆಂಬುದನ್ನು ಕಂಡುಕೊಂಡಿರಬಹುದು. ನಾನು ಯಾವಾಗಲೂ ಒಬ್ಬ ಯೋಜನೆ–ರೂಪಿಸುವವನು; ಆದರೆ ಯಾವದೋ ಕಾರಣದಿಂದ, ನನ್ನ ಆರಂಭಿಕ ಯೋಜನೆ (Plan A) ಕಾರ್ಯಸಾಧ್ಯವಲ್ಲ ಎಂದು ಸತತವಾಗಿ ಕಂಡುಕೊಂಡಿದ್ದೇನೆ. ಬಳಿಕ ನಾನು ಯೋಜನೆ B, C, ಅಥವಾ D ಎಂದು ಮುಂದುವರೆಯಬೇಕಾಗುತ್ತದೆ.

ದೇವರು ಮಾನವರನ್ನು ರಕ್ಷಿಸುವದಕ್ಕೆ ಒಂದು ಪರಿಪೂರ್ಣವಾದ ಯೋಜನೆಯನ್ನು ಹೊಂದಿದ್ದಾನೆಂಬುದನ್ನು ರೋಮಾ 10:14, 15 ವಚನಗಳು ತಿಳಿಸುತ್ತವೆ. ಹೊಣೆಗಾರಿಕೆಯುಳ್ಳ ಜನರು ಕೇಳಿಸಿಕೊಂಡು, ಅದರಲ್ಲಿ ನಂಬಿಕೆಯಿಟ್ಟು, ಮತ್ತು ಅದಕ್ಕೆ ವಿಧೇಯರಾಗುವಂತಾಗಲು ಸುವಾರ್ತೆಯು ಉಪದೇಶಿಸಲ್ಪಡತಕ್ಕದ್ದು. ಇದೊಂದು ಪರಿಪೂರ್ಣವಾದ ಯೋಜನೆ, ಪ್ರತಿಯೊಬ್ಬರ ಆತ್ಮದ ರಕ್ಷಣೆಯಲ್ಲಿ ಫಲಿತಗೊಳ್ಳುವಂತಹ ಒಂದು ಯೋಜನೆ. ಹೇಗೂ, ಪ್ರತಿಯೊಬ್ಬರ ಪ್ರಾಣವೂ ರಕ್ಷಿಸಲ್ಪಟ್ಟಿರುವದಿಲ್ಲ. ಸಮಸ್ಯೆಯು ದೇವರಲ್ಲಾಗಲಿ ಅಥವಾ ಆತನ ಯೋಜನೆಯಲ್ಲಾಗಲಿ ಇರುವದಿಲ್ಲ, ಆದರೆ ಮನುಷ್ಯನ ಅಪನಂಬಿಕೆಯಲ್ಲಿಯೇ ಇರುತ್ತದೆ.

ಕೆಲವರು ದೇವರ ಪರಿಪೂರ್ಣವಾದ ಯೋಜನೆಯ ಸ್ಥಾನದಲ್ಲಿ ತಮ್ಮ ಸ್ವಂತ ಯೋಜನೆಯನ್ನು ಇಡುವದಕ್ಕೆ ಪ್ರಯತ್ನಿಸಿದ್ದಾರೆ. ಕಳೆದುಹೋದವರನ್ನು ರಕ್ಷಿಸಲು ಪ್ರಯತ್ನಿಸುವದಕ್ಕಾಗಿ ಮನುಷ್ಯನು ವಿವಿಧ ತಂತ್ರೋಪಾಯಗಳನ್ನು ರಚಿಸಿದ್ದಾನೆ. ನಾವು ಜಾಗ್ರತೆಯಿಂದಿಲ್ಲವಾದಲ್ಲಿ, ಕರ್ತನ ಸಭೆಯ ಮೇಲೆ ಪರ್ಯಾಯ ಯೋಜನೆಗಳನ್ನು ರೂಪಿಸಿದ ಅಪರಾಧಕ್ಕೊಳಗಾಗಬಲ್ಲದು. ನನ್ನ ದಶಕಗಳ ಕಾಲದ ಬೋಧನೆಯಲ್ಲಿ, ಹೆಚ್ಚು ದೀಕ್ಷಾಸ್ನಾನಗಳು ನಡೆಯುವ ಮತ್ತು ಸಭೆಯಲ್ಲಿ ಬಹುವಾಗಿ ಬೆಳವಣಿಗೆಯ "ಗ್ಯಾರಂಟಿ" (ಖಾತರಿ) ಕೊಡುವಂತಹ ಪ್ರಸ್ತಾಪಗಳ ಬಗ್ಗೆ ಕೇಳಿಸಿಕೊಂಡಿದ್ದೇನೆ. ಈ ಕೆಲವು ವಿಧಾನಗಳಲ್ಲಿ ಯೋಗ್ಯತೆ ಇದೆ; ಆದರೆ ಎಲ್ಲಾ ಹೇಳಿಯಾದ ಮೇಲೆ ಮತ್ತು ಮಾಡಿಯಾದ ಮೇಲೆ ಕೊನೆಗೆ, ನಂಬಿಕೆಯು ಬರುವದು ವಾಕ್ಯವನ್ನು ಕೇಳುವದರಿಂದಲೇ ಎಂಬ ವಾಸ್ತವಾಂಶದ ಮೇಲಿನಿಂದ ನಮ್ಮ ದೃಷ್ಟಿಯನ್ನು ಎಂದಿಗೂ ಕಳೆದುಕೊಳ್ಳಬಾರದು. ಸುವಾರ್ತೆಯ ಕಲಿಸಲ್ಪಡುವ ಹೊರತು, ನಂಬಿಕೆಯು ಬರುವದಕ್ಕೆ ಆಗದು ಮತ್ತು ಆ ಕಾರಣದಿಂದ ರಕ್ಷಣೆಯು ಬರಲಾರದು.

ಹಲವಾರು ವರ್ಷಗಳ ಹಿಂದೆ, ಜನರು "ಜೀವನಶೈಲಿ ಸುವಾರ್ತಾಸೇವೆ" ಬಗ್ಗೆ ಬಹಳ ರೋಮಾಂಚನಗೊಂಡಿದ್ದರು. ಈ ಅನುಸರಣಾಮಾರ್ಗದ ಕುರಿತು ಪುಸ್ತಕಗಳನ್ನು ನಾನು ಓದಿದ್ದೇನೆ ಮತ್ತು ಅದರ ಕುರಿತು ತರಗತಿಗಳನ್ನು ಸಹ ಕಲಿಸಿದ್ದೇನೆ. ಈ ಅನುಸರಣಾದಾರಿಯಲ್ಲಿ ಪ್ರಶಂಸಣೀಯವಾದದ್ದು ಬಹಳಷ್ಟಿದೆ. ಅದು ಇತರರಿಗೆ ಸುವಾರ್ತೆಯನ್ನು ಸಾರುವಂತೆ ನಮಗೆ ಅವಕಾಶ ಒದಗಿ ಬರುವ ಹಾಗೆ ನಮ್ಮ ಹಾಗೂ ಇತರರ ನಡುವೆ ಸೇತುವೆಯನ್ನು ನಿರ್ಮಿಸಬಲ್ಲದು. ಹೇಗೂ, ಕೆಲವರು ತಾವು ಕೇವಲ "ಒಂದು ಕ್ರೈಸ್ತ ಜೀವನ ಶೈಲಿ"ಯಲ್ಲಿ ಜೀವಿಸುವ ಮೂಲಕ ಮಹಾ ಆಜ್ಞೆಯನ್ನು ನೆರವೇರಿಸುವೆವು ಎಂಬ ನಿರ್ಣಯಕ್ಕೆ ಬಂದು ಬಿಡುವರೋ ಎಂಬ ಭಯ ನನಗಿರುತ್ತದೆ. ಜನರು ನಮ್ಮಲ್ಲಿ ಕ್ರಿಸ್ತನ–ಕೇಂದ್ರಿಕೃತವಾದ ಜೀವನವನ್ನು ಕಾಣುವ ಹೊರತು ಕ್ರಿಸ್ತನ ಕುರಿತ ನಮ್ಮ ಸಂದೇಶವನ್ನು ಕೇಳಿಸಿಕೊಳ್ಳಲು ಬಯಸುವದಿಲ್ಲ ಎಂಬುದು ನಿಜವೇ. ಹಾಗಿದ್ದರೂ, ಒಬ್ಬನು ಕ್ರೈಸ್ತನಾಗಿ ಜೀವಿಸುವದನ್ನು ನೋಡುವ ಮೂಲಕ ನಂಬಿಕೆಯು ಬರುವದಿಲ್ಲ. ಅದು ಕ್ರಿಸ್ತನ ಕುರಿತ ಸಂದೇಶವನ್ನು ಕೇಳುವದರಿಂದ ಬರುತ್ತದೆ. ಇತರರಿಗೆ ಉಪದೇಶಿಸುವದಕ್ಕೆ ನಾವು ಯಾವ ದಾರಿಯನ್ನು ಅಥವಾ ವಿಧಾನವನ್ನು ಅನುಸರಿಸಿದರೂ ಸರಿಯೇ, ಅಂತ್ಯದಲ್ಲಿ, ನಾವು ಅವರಿಗೆ ಮಾತುಗಳಲ್ಲಿ ಯೇಸುವಿನ ಸಂದೇಶವನ್ನು ತಿಳಿಯಪಡಿಸತಕ್ಕದ್ದು.

ಕರ್ತನು ನಮಗೆ ದೀರ್ಘಕಾಲದ ಹಿಂದೆಯೇ "ಪಥಸಂಚಲನದ ಆದೇಶ" ಕೊಟ್ಟಿದ್ದಾನೆ (ಮತ್ತಾಯ 28:18-20; ಮಾರ್ಕ 16:15, 16). ಆತನ ಆದೇಶವನ್ನು ಜಾರಿಗೆ ತರುವದಕ್ಕೆ ರೋಮಾ 10:14, 15 ವಚನಗಳು ನಮಗೆ ಇನ್ನಷ್ಟು ಹೆಚ್ಚಿನ ಸ್ಫೂರ್ತಿಯನ್ನು ತುಂಬತಕ್ಕದ್ದು. Dale Hartman ಒಮ್ಮೆ "ಸಭೆಯ ಪ್ರಾಥಮಿಕ ಉದ್ದೇಶಗಳಲ್ಲೊಂದು ಎಂದರೆ ಪರಲೋಕದ ಜನಸಂಖ್ಯೆಯನ್ನು ಹೆಚ್ಚಿಸುವದು" ಎಂದು ಹೇಳಿದನು.[31] ನಾವು ಆ ಉದ್ದೇಶವನ್ನು ನೆರವೇರಿಸುತ್ತಿದ್ದೇವೋ?

## ಅಂದವಾದ ಪಾದಗಳು (10:15)

ನಾನು ಬಾಲಕನಾಗಿದ್ದಾಗ, 10:15 ರಲ್ಲಿನ ಪೌಲನ ಮಾತುಗಳು ನನಗೆ ಗೊಂದಲಕರವಾಗಿದ್ದವು. ಮೊದಲನೆಯದಾಗಿ, ನಿಯಮದ ಪ್ರಕಾರ, ಪಾದಗಳು ದೇಹದಲ್ಲಿಯೇ ಅತ್ಯಂಥ ಕಡಿಮೆ ಆಕರ್ಷಕತೆಯುಳ್ಳ ಅಂಗಗಳಾಗಿವೆ. ಎರಡನೆಯದಾಗಿ, ನನಗೆ ಪರಿಚಯವಿದ್ದ ಬಹುತೇಕ ಬೋಧಕರ ಪಾದಗಳು ಯಾರೂ ಅಂದವಾದವುಗಳೆಂದು ಹೇಳಲಾಗದ ರೀತಿಯಲ್ಲಿ ಅಳತೆಗೆ ಮೀರಿದ ಪಾದಗಳಾಗಿದ್ದವು. ನಂತರದಲ್ಲಿ, ಒಬ್ಬ ಘೋಷಕನ ಭಾವನೆ ಬಗ್ಗೆ ತಿಳಿದುಕೊಂಡೆನು: ಸಂದೇಶವನ್ನು ಹೊತ್ತು ಸ್ಥಳದಿಂದ ಸ್ಥಳಕ್ಕೆ ತಿರುಗಾಡುತ್ತಿದ್ದ ವ್ಯಕ್ತಿ. ಘೋಷಕನು ಶುಭವಾರ್ತೆಯನ್ನು ಹೊತ್ತು ತಂದಾಗ, ಪಾದರಕ್ಷೆಯಲ್ಲಿರುವ ಆತನ ಪಾದಗಳು ಬಹಳ ಹೊಲಸಾಗಿದ್ದಿರಬಹುದಾಗಿದೆ, ಬಿರುಕುಬಿಟ್ಟಿರಬಹುದು, ಜಡ್ಡುಗಟ್ಟಿರಬಹುದು, ಮತ್ತು ದುರ್ಗಂಧವನ್ನು ಸಹ ಬೀರಬಹುದಾಗಿದೆ—ಆದರೆ ಆ ಪಾದಗಳೇ ಆತನನ್ನು ಅವನ ಶ್ರೋತೃಗಳ ಬಳಿಗೆ ಹೊತ್ತು ತಂದಿದ್ದವು. ಆದುದರಿಂದ, ಆವರ ದೃಷ್ಟಿಯಲ್ಲಾದರೋ, ಪಾದಗಳು "ಅಂದವಾಗಿದ್ದವು." JB ತರ್ಜುಮೆಯು ಯೆಶಾಯನ ಪುಸ್ತಕದ ಉಲ್ಲೇಖವನ್ನು ಹೀಗೆ ಭಾವಾನುವಾದಗೊಳಿಸುತ್ತದೆ: "ಶುಭವಾರ್ತೆಯನ್ನು ತರುವವರ ಹೆಜ್ಜೆಗಳು ಒಂದು ಸ್ವಾಗತಾರ್ಹವಾದ ಶಬ್ದವಾಗಿರುತ್ತದೆ."

---

**ಅಡಿ ಟಿಪ್ಪಣಿಗಳು**

[1]H. Strathmann, "μάρτυς," in *Theological Dictionary of the New Testament*, ed. Gerhard Kittel, trans. and ed. Geoffrey W. Bromiley (Grand Rapids, Mich.: Wm. B. Eerdmans Publishing Co., 1967), 4:496. [2]*The Analytical Greek Lexicon* (London: Samuel Bagster & Sons, 1971), 181. [3]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* (Nashville: Thomas Nelson Publishers, 1985), 348. [4]ಈ ಮಾತುಗಳು Frank Sinatraರಿಂದ ಪ್ರಸಿದ್ಧಗೊಳಿಸಲ್ಪಟ್ಟ ಒಂದು ಹಾಡಿನಿಂದ ತೆಗೆದುಕೊಳ್ಳಲ್ಪಟ್ಟಿವೆ (Paul Anka, "My Way" [1968]). [5]F. F. Bruce, *The Letter of Paul to the Romans*, 2d ed., The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 190. [6]Vine, 75. [7]Leon Morris, *The Epistle to the Romans* (Grand Rapids, Mich.: Wm. B. Eerdmans Publishing Co., 1988), 383. [8]ಇದಕ್ಕೆ ಕೆಲವರು ಹೊರತಾದವರು ಇದ್ದಾರೆ—ಒಂದಿಲ್ಲಾ ಒಂದು ಕಾರಣಕ್ಕೆ ಅವರ ಕ್ರಿಯೆಗಳಿಗೆ ಹೊಣೆಗಾರರಲ್ಲದ ಜನರು—ಆದರೆ ಪೌಲನು ಮನಸ್ಸಿನಲ್ಲಿ ಮಾನದಂಡವನ್ನಿಟ್ಟುಕೊಂಡು ಮಾತಾಡುತ್ತಿದ್ದಾನೆ ಹೊರತು ಹೊರತಾಗಿರುವಿಕೆಯನ್ನಲ್ಲ. [9]J. A. Thompson, *Deuteronomy*, The Tyndale Old Testament Commentaries (Downers Grove, Ill.: Inter-Varsity Press, 1974), 286.

[10]John R. W. Stott, *The Message of Romans: God's Good News for the World*, The Bible Speaks Today (Downers Grove, Ill.: InterVarsity Press, 1994), 283.

[11]ರೋಮಾಪುರದವರಿಗೆ ಪತ್ರಿಕೆಯುದ್ದಕ್ಕೂ ಕಾರ್ಯಗಳನ್ನು "ಮನಪೂರ್ವಕವಾಗಿ" (ತೋರಿಕೆಗಾಗಿ ಅಲ್ಲ) ಮಾಡುವದರ ಪ್ರಾಮುಖ್ಯತೆಯ ಬಗ್ಗೆ ಒತ್ತಿ ಹೇಳಲಾಗಿರುತ್ತದೆ (6:17, 18ರಲ್ಲಿರುವ ಪ್ರಕಾರ). [12]C. E. B. Cranfield, *Romans: A Shorter Commentary* (Grand Rapids, Mich.: Wm. B. Eerdmans Publishing Co., 1985), 258. [13]NASB ಯು ಅಪೊಸ್ತಲರ ಕೃತ್ಯಗಳು 8:37ನ್ನು ಆವರಣ ಚಿಹ್ನೆಯಲ್ಲಿಟ್ಟಿರುತ್ತದೆ ಮತ್ತು ಪ್ರಾಚೀನ ಹಸ್ತಪ್ರತಿಗಳಲ್ಲಿ ಈ ವಚನವು ಇರುವದಿಲ್ಲ ಎಂಬ ವಿವರಣೆಯನ್ನು ಕೊಡುತ್ತದೆ. NIV ಮತ್ತು NRSVಗಳು ಸೇರಿದಂತೆ ಹಲವಾರು ಆಧುನಿಕ ತರ್ಜುಮೆಗಳು, ವಚನವನ್ನು ಅಡಿಟಿಪ್ಪಣಿಗಳಲ್ಲಿ ಸೇರಿಸಿರುತ್ತವೆ. [14]ಅನೇಕ ವ್ಯಾಖ್ಯಾನಕಾರರು ರೋಮಾ 10:9, 10ರ ಮೇಲೆ ವ್ಯಾಖ್ಯೆಗಳನ್ನು ನೀಡುವಾಗ ದೀಕ್ಷಾಸ್ನಾನದ ಮುಂಚೆ ಅರಿಕೆ ಮಾಡುವ ಬಗ್ಗೆ ಪ್ರಸ್ತಾಪಿಸುತ್ತಾರೆ. [15]R. C. Bell, *Studies in Romans* (Austin, Tex.: Firm Foundation Publishing House, 1957), 122 ರಿಂದ ಆಯ್ದುಕೊಳ್ಳಲ್ಪಟ್ಟಿದೆ. [16]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick W. Danker (Chicago: University of Chicago Press, 2000), 290. [17]Bruce, 193. [18]Morris, 388. [19]Jim McGuiggan, *The Book of Romans*, Looking Into The Bible Series (Lubbock, Tex.: Montex Publishing Co., 1982), 311. [20]Douglas J. Moo, *Romans*, The NIV Application Commentary (Grand Rapids, Mich.: Zondervan Publishing House, 2000), 333.

[21]Vine, 560. [22]Ibid., 481. [23]KJVಯಲ್ಲಿ "ದೇವರ ವಾಕ್ಯ" ಎಂದಿರುತ್ತದೆ. ಪ್ರಾಚೀನ ಹಸ್ತಪ್ರತಿಗಳ ಪುರಾವೆಗಳು "ಕ್ರಿಸ್ತನ ವಾಕ್ಯ" ಕ್ಕೆ ಆದ್ಯತೆಯಿರುವದಕ್ಕೆ ಪುರಾವೆಗಳನ್ನು ಸೂಚಿಸುವದೇನೆಂದರೆ. [24]James D. G. Dunn, *Romans 9—16*, Word Biblical Commentary, vol. 38B (Dallas: Word Books, 1986), 623. [25]McGuiggan, 312. [26]Vine, 438. [27]ಇತರ ತರ್ಜುಮೆಗಳು (ವಿಶೇಷವಾಗಿ ಏಕ-ವ್ಯಕ್ತಿ ತರ್ಜುಮೆಗಳು) *hupakouō* ಎಂಬುದರಲ್ಲಿ ವಿಧೇಯತೆಯ ಯಾವದೇ ಕುರುಹುಗಳಿರದಂತೆ ತೆಗೆದುಹಾಕುವದಕ್ಕೆ ಬಹುವಾಗಿ ಶ್ರಮಿಸುತ್ತವೆ—ಆದರೆ ಅದು ಆಗಲೂ ಹಾಗೆಯೇ. [28]2 ಥೆಸಲೋನಿಕ 1:8ರಲ್ಲಿ, NASB ಯು ಅದೇ ಮೂಲಭೂತ ಗ್ರೀಕ್ ಪದವನ್ನು "ಸುವಾರ್ತೆಗೆ ವಿಧೇಯವಾಗು" ಎಂದು ಅನುವಾದಿಸುತ್ತದೆ. [29]Larry Deason, *"The Righteousness of God": An Indepth Study of Romans*, rev. ed. (Clifton Park, N.Y.: Life Communications, 1989), 260. [30]Stott, 280. [31]Dale Hartman, sermon preached at Eastside church of Christ, Midwest City, Oklahoma, 16 November 2003.